ಜನಪದ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಜನವರಿ - ೨೦೧೫ ಸಂಚಿಕೆ - ೦೬

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ,
ಹಿಂದೂ, ಕ್ರೈಸ್ತ, ಮುಸಲ್ಮಾನ,
ಪಾರಸಿಕ ಜೈನರುದ್ಯಾನ,
ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಣಿಕ ರಾರಾಮ!

– ಕುವೆಂಪು

ಧರ್ಮ, ಧರ್ಮಾಂತರ ಮತ್ತು ಧರ್ಮಾಂಧತೆ

ಜನಪದ ವಿಚಾರದಲ್ಲಿ

ಜನವರಿ– ೨೦೧೫

೧) ಧರ್ಮ, ಧರ್ಮಾಂತರ ಮತ್ತು ಧರ್ಮಾಂಧತೆ

– ಸುರೇಂದ್ರ ಕೌಲಗಿ

ಸರ್ವ ಜನಾಂಗದ ಶಾಂತಿಯ ತೋಟ ಭಾರತದಲ್ಲಿ ಮತಾಂತರದ ಗಾಳಿ ಬೀಸುತ್ತಿದೆ. ಇದು ಅಸಂವಿದಾನಿಕ. ಈ ಕುರಿತಾದ ತಟಸ್ಥ ವಿಚಾರಗಳು ಈ ಲೇಖನದಲ್ಲಿ.

೨) ಸನ್ಮಾನ, ಬಹುಮಾನ ಮತ್ತು ಸಮಾಜಸೇವೆ – ಸುರೇಂದ್ರ ಕೌಲಗಿ

೩) ಸುಗಮ ಚಾಲನೆ – ಡಾ.ಬೋರೇಗೌಡ ಚಿಕ್ಕಮರಳಿ

೪) ಜೀವನವಿಡೀ ನೆನಪಿಡುವ ಭೇಟಿ – ರೈಮ ಗೋಪಿನಾಥನ್ ನಾಯರ್

೫) ಸ್ವಚ್ಛ ಭಾರತ ಆಂದೋಲನಕ್ಕೆ ಮೂಲ ಪ್ರಶ್ನೆಗಳು

– ಮೂಲ:ಶಂಕರ ನಾರಾಯಣನ್ – ಅನು : ಸುರೇಂದ್ರ ಕೌಲಗಿ

ನಾಗರೀಕರಿಂದಾಗುವ ಅಸ್ವಚ್ಛತೆಯನ್ನು ಸ್ವಚ್ಛಗೊಳಿಸುವ ಅಭಿಯಾನ ಹೂಡಿರುವ ಸರ್ಕಾರ ತನ್ನ ನೀತಿಯಿಂದಲೇ ಆಗುತ್ತಿರುವ ಕೈಗಾರಿಕಾ ಮಾಲಿನ್ಯ ಕುರಿತು ಚಿಂತಿಸುತ್ತಿಲ್ಲವೇಕೆ?. ಇದು ಈ ಲೇಖನದ ಪ್ರಶ್ನೆ.

೬) ಕಂಬಿ ಹಿಂದಣ ಜೀವಗಳು – ನಗರಿ ಬಾಬಯ್ಯ

ಅಮಾಯಕ ಪ್ರಗತಿಶೀಲ ಚಿಂತಕನೋರ್ವನನ್ನು ಉಗ್ರ ಎಡಪಂಥೀಯನೆಂದು ತಪ್ಪಾಗಿ ಗ್ರಹಿಸಿ ಬಂಧಿತರಾದ ಓರ್ವ ಪ್ರಗತಿಶೀಲ ಚಿಂತಕ ಕೈದಿಯ ಕಾರಾಗೃಹ ಅನುಭವಗಳು ಇಲ್ಲಿ ದಾಖಲಾಗಿದೆ.

೭)ಜನಪದ ಸೇವಾ ಟ್ರಸ್ಟ್ ಸಮಾಚಾರ

೮) ಜನಪದ ನಿಲಯದ ಅಂತರಂಗದಲ್ಲಿ – ೧೨೯

೯) ಖಾದಿ ವಿಚಾರ

೧೦)ಸರ್ವೋದಯ ಆಂದೋಲನದ ಮುನ್ನಡೆ

೧೧)ಸನ್ಮಾನ್ಯರಿಂದ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನವರಿ - ೨೦೧೫

ಸಂಪುಟ - ೧೫

ಸಂಚಿಕೆ - ೦೬

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854

email :
janapada@yahoo.com
Web: janapada.net

ಅಬಲೆ

ಅಪ್ಪ ನಿನಗೆ ಮಗಳೇ ಬೇಕಾ?
ಮರೆಯಾಯಿತೆ? ನಿನ್ನ ಮಮಕಾರ
ತಾತ ನಿನಗೊ ಮೊಮ್ಮಗಳೇ ಬೇಕಾ?
ಬೆಂದು ಪುಡಿಯಾಯಿತೆ? ನಿನ್ನಾನುಭವದ ಮೂಟೆ
ಗುರುವೆ ನಿಮಗೊ ನಿಮ್ಮ ಶಿಷ್ಯೆಯೇ ಬೇಕಾ?
ಆರಿತೆ ನಿನ್ನ ಬೆಳಕಿನ ದೀಪ?
ಸಹೋದರರೆ ನಿಮಗೂ
ನಿಮ್ಮಕ್ಕ-ತಂಗಿಯೇ ಬೇಕಾ?
ಎಲ್ಲಿ ನಿಮ್ಮ ಸಲುಗೆ-ಪ್ರೀತಿ
ನನಗೂ ಅಪನೊಡನಾಡಬೇಕು
ತಾತನೊಂದಿಗನುಭವದ ಕಥೆ ಕೇಳಬೇಕು
ಅಣ್ಣ-ತಮ್ಮನೊಂದಿಗೆ ಪ್ರೀತಿಯನ್ನುಣಬೇಕು
ಗುರುವಿನೊಂದಿಗೆ ಅರಿತು ಕಲಿಯಬೇಕು
ಎಂಬ ಆಸೆಯಿದೆ-ಹಂಬಲವಿದೆ
ನಾನು ನಿಮ್ಮವಳೆ-ಮನುಷ್ಯಳೆ
ಹೆಣ್ತನವೆ ನನಗೆ ಮುಳುವಾಯಿತೆ?
ಸಂಬಂಧಗಳೆಲ್ಲಾ ಹಳಸಿ ಬೆಲೆಯಿಲ್ಲದಾಗಿ
ಕಾಮದ ಕಣ್ಣುಗಳು ಹೆಣ್ತನವ ಕಸಿಯಲು
ಹಾತೊರೆದು ಮುಗ್ಧ ಜೀವವೆಂಬುದನ್ನು ಮರೆತು
ಹಸಿಯ ಮಾಂಸವ ರಣಹದ್ದು ಕಿತ್ತು ತಿನ್ನುವಂತೆ
ನನ್ನ ಹೆಣ್ತನವನ್ನು ಜೊತೆಗೆ ನನ್ನ ಜೀವನವನ್ನೆ
ಕಿತ್ತು ತಿಂದಿರಲ್ಲಾ ಯೊರೊಡನೇಳಲಿ
ನನ್ನ ನೋವು ಹತಾಶೆಯ.
ಬಾಳುವ ಜೀವವನ್ನು ಅರಳುವ
ಹೂವನ್ನು ಹೊಸಕಿದಂತೆ
ಕ್ಷಣಮಾತ್ರದಲ್ಲಿ ಜೀವಂತ ಶವ ಮಾಡಿದಿರಲ್ಲ
ನಾನೊಬ್ಬಳೇನು ಮಾಡಲಿ
ಮರೆಯದಿರಿ ಹೆಣ್ತನವ ನಮ್ಮೊದಯಕ್ಕೆ ಕಾರಣ
ಬದುಕಲು ಬಿಡಿ, ಅರಳುವ ಹೂ ಅರಳಲಿ ಬಿಡಿ
ನನ್ನುದರದ ನೋವು ನನಗೆ ಇರಲಿ
ಹತಾಶೆಯೊಂದಿಗೆ ... ಇಂತಿ
ಅಬಲೆ

– ಮಹದೇವ್.ಕೆ.ಪಿ

ಸಾಭಾರ : ಸಂವಾದ

ಚಿಂತನೆಗೊಂದು ಸಂಗತಿ

ಬಹು ಇತ್ತೀಚೆಗೆ ಪಾಕಿಸ್ತಾನದ ಪೇಶಾವರದಲ್ಲಿ ಸೈನಿಕರ ಶಾಲೆಯೊಂದರ ಒಳ ನುಗ್ಗಿ ತಾಲಿಬಾನಿಗಳು ೧೩೨ ಮಕ್ಕಳನ್ನು ಗುಂಡಿಟ್ಟು ಸಾಯಿಸಿ ಒರ್ವ ಅಧ್ಯಾಪಕಿಯನ್ನು ಆ ಮಕ್ಕಳ ಎದುರಿಗೆ ಜೀವಂತವಾಗಿ ಸುಟ್ಟು ಹಾಕಿದ್ದಾರೆ. ಮಾನವ ರೂಪದ ಪಿಶಾಚಿಗಳಿಂದ ಆದ ಈ ರಾಕ್ಷಸಿ ಕೃತ್ಯ ಮಾನವರೆಲ್ಲರೂ ತಲೆ ತಗ್ಗಿಸುವಂತೆ ಮಾಡಿದೆ. ಎಂಥ ಕಟು ಮಾತುಗಳಲ್ಲಿ ಈ ಹೇಯ ಕೃತ್ಯವನ್ನು ಖಂಡಿಸಿದರೂ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ರಾಜಕೀಯದ ಚದುರಂಗದಾಟಕ್ಕೆ ಮತ್ತು ಧರ್ಮಾಂಧತೆಯ ಪ್ರಕೋಪಕ್ಕೆ ಮುಗ್ಧ ಮಕ್ಕಳು ಬಲಿಯಾಗುತ್ತಿದ್ದಾರೆ. ಸಾಂಸಾರಿಕ ಕಲಹಗಳಲ್ಲಿಯು ಮಕ್ಕಳು ಬಲಿಯಾಗುತ್ತಾರೆ. ಮಕ್ಕಳ ಹತ್ಯೆ ಆಗಾಗ್ಗೆ ಆಗುತ್ತಲೇ ಇರುತ್ತದೆ. ೧೯೭೪ರಲ್ಲಿ ಇಸ್ರೇಲ್‌ನಲ್ಲಿ ಉಗ್ರರ ದಾಳಿಗೆ ಸಿಕ್ಕು ೨೮ ಮಕ್ಕಳು ಅಸುನೀಗಿದರು; ೨೦೦೧ರಲ್ಲಿ ಕಿನ್ಯಾದ ಶಾಲೆಗೆ ಬೆಂಕಿ ಹಚ್ಚಿ ೬೭ ವಿದ್ಯಾರ್ಥಿಗಳು ಸತ್ತರು; ೨೦೦೪ರಲ್ಲಿ ಇರಾಕ್‌ನ ಬಾಗ್ದಾದಿನಲ್ಲಿ ಕಾರ್ ಬಾಂಬಿಗೆ ೩೫ ಮಕ್ಕಳು ಬಲಿಯಾದರು. ೨೦೦೭ರಲ್ಲಿ ಆಫ್‌ಘಾನಿಸ್ತಾನದಲ್ಲಿ ೬೧ಮಕ್ಕಳ ಮಾರಣ ಹೋಮವಾಯಿತು; ೨೦೧೧ರಲ್ಲಿ ನಾರ್ವೆಯ ಒಸ್ಲೊದಲ್ಲಿ ಬಾಂಬ್ ಮತ್ತು ಗುಂಡಿನ ದಾಳಿಯಿಂದ ೫೦ ಮಕ್ಕಳು ಬಲಿಯಾದರು. ಈ ರೀತಿ ಅಮಾಯಕ ಮಕ್ಕಳು ಉಗ್ರರ ಗುಂಡಿಗೆ ಬಲಿಯಾಗುತ್ತಿದ್ದಾರೆ. ತಾಲಿಬಾನಿಗಳ ಮಕ್ಕಳ ವಿರೋಧಿ ಚಟುವಟಿಕೆಯನ್ನು ಪಾಕಿಸ್ತಾನದ ಮಲಾಲ ಎಂಬ ಬಾಲಕಿ ವಿರೋಧ ಮಾಡಿ ಧೈರ್ಯವನ್ನು ಪ್ರದರ್ಶಿಸಿದ್ದಕ್ಕೆ ಅವಳನ್ನು ನೋಬೆಲ್ ಶಾಂತಿ ಪುರಸ್ಕಾರದಿಂದ ಸನ್ಮಾನಿಸಲಾಯಿತು. ಅದೇ ರೀತಿ ಮಕ್ಕಳ ಬಾಲ್ಯವನ್ನು ಉಳಿಸಿ ಅವರನ್ನು ಸುಯೋಗ್ಯ ಪ್ರಜೆಗಳನ್ನಾಗಿ ಮಾಡುವುದಕ್ಕೆಂದೇ ಕೆಲಸ ಮಾಡಿದ ಭಾರತದ ಕೈಲಾಶ್ ಸತ್ಯಾರ್ಥಿಯವರಿಗೂ ಕೂಡ ನೊಬೆಲ್ ಶಾಂತಿ ಪ್ರಶಸ್ತಿಯಿಂದ ಸನ್ಮಾನಿಸಲಾಯಿತು. ನಮ್ಮಿ ಜಗತ್ತಿನಲ್ಲಿ ಮಾನವ ಸಮಾಜ ನೆಮ್ಮದಿಯ ಜೀವನ ನಡೆಸುವಂತಾಗಬೇಕಾದರೆ ಜಗತ್ತಿನಲ್ಲಿರುವ ಎಲ್ಲ ಮಕ್ಕಳು ಸುರಕ್ಷಿತವಾಗಿರಬೇಕು, ಅವರಿಗೆ ಒಳ್ಳೆಯ ಸಂಸ್ಕಾರ ಸಿಗಬೇಕು ಮತ್ತು ಶಿಕ್ಷಣ ಸಿಗಬೇಕು, ಜೊತೆಗೆ ಅವರಲ್ಲಿರುವ ಪ್ರತಿಭೆ ಪ್ರಕಾಶಕ್ಕೆ ಬರಲು ಅವಕಾಶ ದೊರೆಯಬೇಕು. ಇಂಥ ಒಂದು ಸುಸ್ಥಿತಿಯನ್ನು ನಿರ್ಮಾಣ ಮಾಡುವ ಜವಾಬ್ದಾರಿ ವಿಶ್ವದ ಎಲ್ಲ ರಾಷ್ಟ್ರಗಳ ಸರ್ಕಾರಗಳ ಮೇಲೆ ಮತ್ತು ವಿಶ್ವ ಸಂಸ್ಥೆಯ ಮೇಲೆ ಇದೆ. ಜಗತ್ತಿನ ಜನರೆಲ್ಲರೂ ಕೂಡ ಮಕ್ಕಳ ಹಿತ ಕಾಪಾಡಲು ಸಂಕಲ್ಪಿಸಬೇಕು. ಪೇಶಾವರದಲ್ಲಿ ನಡೆದಂಥ ದುರ್ಘಟನೆ ಪುನಃ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ.

ಧರ್ಮ, ಧರ್ಮಾಂತರ ಮತ್ತು ಧರ್ಮಾಂಧತೆ

– ಸುರೇಂದ್ರ ಕೌಲಗಿ

ಅತ್ಯಂತ ವಿವಾದಕ್ಕೊಳಗಾದ ಮತ್ತು ತಪ್ಪು ಗ್ರಹಿಕೆಗೆ ಒಳಗಾದ ವಿಷಯ ಧರ್ಮ. ಈ ವಿಷಯಕ್ಕೆ ಸಂಬಂಧಿಸಿದಂತೆ ಇರುವಷ್ಟು ಸಾಹಿತ್ಯ ಬೇರೆ ಯಾವ ವಿಷಯದ ಬಗ್ಗೆಯೂ ಇಲ್ಲ. ದಿನ ಬೆಳಗಾದರೆ ಧರ್ಮದ ವಿಷಯ ಚರ್ಚೆಗೆ ಬರುತ್ತದೆ. ಆ ಚರ್ಚೆ ಖಾಸಗಿ ವಲಯದಲ್ಲಿ, ಮತ್ತು ಸಾರ್ವಜನಿಕ ವಲಯದಲ್ಲಿ ನಡೆಯುತ್ತದೆ. ಕೆಲವೊಂದು ಸಲ ಆ ಚರ್ಚೆ ರಾಜಕೀಯ ವಲಯದಲ್ಲೂ ನಡೆಯುತ್ತದೆ. ಇದೊಂದು ಅಂತರರಾಷ್ಟ್ರೀಯ ವಿಷಯವಾಗಿದೆ. ಗಂಗೋತ್ರಿಯಲ್ಲಿ ಹುಟ್ಟುವ ಗಂಗಾ ನದಿ ಮೊದಲು ಶುದ್ಧವಾಗಿದ್ದು ಪ್ರವಹಿಸುತ್ತಾ ಹೋದಂತೆ ಮಲಿನವಾಗುತ್ತಾ ಹೋಗುತ್ತದೆ. ಅದೇ ರೀತಿ ಧರ್ಮವೂ ಕೂಡ ಉಗಮವಾದಾಗ ಪರಿಶುದ್ಧವಾದದ್ದು ಕಾಲ ಪ್ರವಾಹ ಹರಿದಂತೆ, ಮಾನವ ಸಂಬಂಧಗಳು ಸಂಕೀರ್ಣವಾಗುತ್ತಾ ಹೋದಂತೆ ಧರ್ಮ ತನ್ನ ಮೂಲ ಪರಿಶುದ್ಧತೆಯನ್ನು ಕಳೆದುಕೊಂಡು ಸಧ್ಯ ಅತ್ಯಂತ ಮಲಿನವಾಗಿ ಸಮಾಜದ ಮಧ್ಯೆ ಇದೆ. ಪ್ರಾಚೀನ ಕಾಲದಲ್ಲಿ ಯಾವ ಯಾವ ಧರ್ಮ ಸಂಸ್ಥಾಪಕರು, ಧರ್ಮ ಪ್ರವರ್ತಕರು ಆಗಿ ಹೋದರೋ ಅವರ ಹೃದಯದಲ್ಲಿದ್ದಂತಹ ಧರ್ಮದ ವಿಶಾಲಾರ್ಥ ಆ ಧರ್ಮಗಳ ಅನುಯಾಯಿಗಳ ಹೃದಯದಾಳಕ್ಕೆ ಇಳಿಯದೇ ಹೋಯಿತು. ಆದ್ದರಿಂದಲೆ ಇಂದು ಧರ್ಮದ ಹೆಸರನಲ್ಲಿ ಅಧರ್ಮೀಯ ಕೃತ್ಯಗಳು ನಡೆಯುತ್ತಿವೆ. "ಧರ್ಮ" ಅಂದರೆ ಯಾವುದು ಮನುಷ್ಯನನ್ನು ಮೇಲಕ್ಕೆ ಎತ್ತಿ ಹಿಡಿಯುತ್ತದೊ ಅದು ಧರ್ಮ ಎಂದು ಸಾರ್ವತ್ರಿಕವಾಗಿ ಅರ್ಥೈಸಲ್ಪಡುತ್ತದೆ. ಮನುಷ್ಯ ಪಶುತ್ವದಿಂದ ಮಾನವತ್ವಕ್ಕೆ, ಮಾನವತ್ವದಿಂದ ದೈವತ್ವಕ್ಕೆ ಏರುತ್ತಾ ಹೋಗಲು ಯಾವುದು ನೆರವಾಗುತ್ತದೊ ಅದು ಧರ್ಮವೆನಿಸುತ್ತದೆ. ಆದರೆ ಈಗ ದೇಶದಲ್ಲಿ ಮತ್ತು ಬೇರೆಡೆಗಳಲ್ಲಿ ನಡೆಯುತ್ತಿರುವುದು ತದ್ವಿರುದ್ಧವಾದ ಸಂಗತಿ. ಮನುಷ್ಯ ದೈವತ್ವದ ಕಡೆಗೆ ಹೋಗದೆ ಪಶುತ್ವದ ಕಡೆಗೆ ಹೋಗುತ್ತಿದ್ದಾನೆ. ಇತ್ತೀಚೆಗೆ ಪಾಕಿಸ್ತಾನದ ಪೇಶಾವರದಲ್ಲಿ ಧರ್ಮಾಂಧರಾದ ತಾಲಿಬಾನಿಗಳು ದೇವರ ಸ್ವರೂಪವೇ ಆದ ಮಕ್ಕಳನ್ನು ಹತ್ಯೆಗೈದರು. ಹತ್ಯೆಗೈಯುವ ಮೊದಲು ಧರ್ಮಗ್ರಂಥವನ್ನು ಒತ್ತಾಯ ಪೂರ್ವಕ ಓದಿಸಿದರು! ಅತ್ತ ಧರ್ಮದ ಹೆಸರಿನಲ್ಲಿ ಹತ್ಯೆಯಾದರೆ ಇತ್ತ ಅದೇ ಧರ್ಮದ ಹೆಸರಿನಲ್ಲಿ ಬಲವಂತವಾಗಿ ಮತಾಂತರ ನಡೆಯುತ್ತಿದೆ. ಇತಿಹಾಸದ

ಕಾರಣದಿಂದ ಹಿಂದಕ್ಕೆ ಭಾರತದಲ್ಲಿ ಮತಾಂತರ ಆಯಿತೆಂದು ಈಗ ಅದಕ್ಕೆ ಪ್ರತಿಯಾಗಿ ಮತಾಂತರಗೊಳಿಸುವ ಪ್ರಯತ್ನ ಧರ್ಮದ ಒರೆಗಲ್ಲಿನ ಪರೀಕ್ಷೆಯಲ್ಲಿ ಸರಿಯೆಂದು ಸಿದ್ಧವಾಗುತ್ತದೆಯೇ ಎಂಬುದನ್ನು ಮತಾಂತರದ ಕ್ರಿಯೆಗಳ ಹಿಂದೆ ಅಡಗಿರುವ ಚಾಲಕರು ಯೋಚನೆಮಾಡಬೇಕು. ಧರ್ಮ ಬೇಕಾದಾಗ ಧರಿಸಿಕೊಳ್ಳುವ ಮತ್ತು ಬೇಡವಾದಾಗ ತೆಗೆದುಹಾಕುವ ಬಟ್ಟೆಯಂತಲ್ಲ. ಅದು ಶರೀರಕ್ಕೆ ಸಂಬಂಧಿಸಿದ್ದಲ್ಲ. ಆತ್ಮಕ್ಕೆ ಸಂಬಂಧಿಸಿದ್ದು. ಮನಸ್ಸು ಮತ್ತು ಬುದ್ಧಿಯ ಸಂಯೋಗದಿಂದ ಒಪ್ಪಬೇಕಾದಂಥದ್ದು. ಧರ್ಮ ಒಂದು ಜೀವನ ವಿಧಾನ. ಸಂಸ್ಕಾರದಿಂದಲೂ, ಸನಾತನವಾದ ಸ್ವಧರ್ಮದಿಂದಲೂ ದತ್ತವಾಗುವ ಜೀವನ. ಯಾವ ಧರ್ಮವೂ ಪರಿಪೂರ್ಣವಲ್ಲ. ಪ್ರತಿಯೊಂದು ಧರ್ಮದಲ್ಲಿಯೂ ಅನೇಕ ಒಳ್ಳೆಯ ಅಂಶಗಳಿರುವಂತೆ ಹಲವಾರು ದೋಷಗಳೂ ಇವೆ. ಧರ್ಮಗಳಲ್ಲಿ ಪರಸ್ಪರ ಹೋಲಿಕೆ ಮಾಡುವುದೇ ಒಂದು ಅಧರ್ಮ. ಹಿಂದೂ ಧರ್ಮ ಒಂದನ್ನು ಬಿಟ್ಟು ಬೇರೆಲ್ಲ ಧರ್ಮಗಳೂ ವ್ಯಕ್ತಿ ನಿಷ್ಟವಾಗಿರುವುದರಿಂದ ವ್ಯಕ್ತಿ ಸಹಜವಾದ ದೋಷಗಳು. ಆ ಧರ್ಮಗಳಲ್ಲಿಯೂ ಬಂದಿರಲು ಸಾಧ್ಯ. ಈ ರೀತಿ ದೋಷಪೂರ್ಣವಾಗಿರಬಹುದಾದ ಧರ್ಮಗಳ ಅನುಯಾಯಿಗಳು ತಮ್ಮ ಧರ್ಮವೇ ಶ್ರೇಷ್ಠವೆಂದು ತಿಳಿದು ಬೇರೆ ಧರ್ಮೀಯರನ್ನು ತಮ್ಮ ಧರ್ಮಕ್ಕೆ ಮತಾಂತರಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಆಲೋಚಿಸಬೇಕು. ಹಿಂದೂ ಧರ್ಮ ಅಪೌರುಷೇಯ ಆಗಿರುವುದರಿಂದ ಆ ಧರ್ಮದಲ್ಲಿ ಮತಾಂತರ ನಡೆದ ವಿಷಯ ಹಿಂದೂ ಧರ್ಮದ ಯಾವ ಪ್ರಾಚೀನ ಸಾಹಿತ್ಯದಲ್ಲಿಯೂ ದೊರೆಯುವುದಿಲ್ಲ. ಮತಾಂತರ ವಿಷಯದ ಪ್ರಸ್ತಾಪವೇ ಹಿಂದೂ ಧರ್ಮದಲ್ಲಿ ಇಲ್ಲದೇ ಇರುವಾಗ ಬೇರೆ ಧರ್ಮೀಯರನ್ನು ಹಿಂದೂ ದರ್ಮಕ್ಕೆ ಮತಾಂತರಿಸುವುದು ಎಷ್ಟು ಸರಿ ಎಂಬುದು ಧರ್ಮದ ಒರೆಗಲ್ಲಿನ ಪರೀಕ್ಷೆಯಲ್ಲಿ ಸಿದ್ಧವಾಗುವುದೆಂಬುದನ್ನು ಮತಾಂತರದ ಪ್ರಕ್ರಿಯೆ ಹಿಂದೆ ಇರುವ ಚಾಲಕನು ಯೋಚನೆ ಮಾಡಬೇಕು.

ಗಾಂಧೀಜಿಯವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ಪ್ರಯತ್ನ ನಡೆಯಿತು. ಗಾಂಧಿ ವಿಚಾರಶೀಲ ವ್ಯಕ್ತಿಯಾದುದರಿಂದ ಅವರಿಗೆ ಕ್ರೈಸ್ತ ಧರ್ಮದ ಉದಾತ್ತ ಮಹಿಮೆಯನ್ನು ತಿಳಿಸುವ ಸಾಹಿತ್ಯವನ್ನೆಲ್ಲ ಕೊಡಲಾಯಿತು. ಅವರು ಅದೆಲ್ಲವನ್ನೂ ಓದಿದರು. ಆದರೆ ಅವರಿಗೆ ಹಿಂದೂ ಧರ್ಮ ಯಾವ ರೀತಿಯಲ್ಲೂ ಕೀಳೆಂದು ಅನಿಸದೇ ಇದ್ದುದರಿಂದ ಅವರು ಧರ್ಮಾಂತರಗೊಳ್ಳಲಿಲ್ಲ ಬದಲಿಗೆ ಹಿಂದೂಧರ್ಮದಲ್ಲಿರಬಹುದಾದ ದೋಷಗಳ ನಿವಾರಣೆಗೆ ತಮ್ಮ ಜೀವನವನ್ನೆ ಮುಡುಪಾಗಿಟ್ಟರು. ತಮ್ಮ ಸಮಾಜದಿಂದ ಬಹಿಷ್ಕೃತರಾಗಿದ್ದರೂ ಅವರು ಹಿಂದೂ ಧರ್ಮವನ್ನು ಬಿಡಲಿಲ್ಲ. ಬದಲಿಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದ ಬೋಧನೆಗೆ

ಅರ್ಹರಾಗಿರುವಂತೆ ವರ್ತಿಸಬೇಕೆಂದು ಹೇಳಿದರು. ಮತಾಂತರ ಬೌದ್ಧಿಕ ಹಂತದಲ್ಲಿ ತೀರ್ಮಾನವಾಗಬೇಕೆ ಹೊರತು ಭಯದಿಂದಾಗಲೀ, ಆಮಿಷಗಳ ಕಾರಣದಿಂದಾಗಲೀ ಆಗುವಂಥದ್ದಲ್ಲ. ಒಂದು ವೇಳೆ ಈ ಕಾರಣಗಳಿಂದ ಮತಾಂತರವಾದರೂ ಅದು ತಾತ್ಕಾಲಿಕವಾಗಿರುತ್ತದೆಯೇ ಹೊರತು ಶಾಶ್ವತವಾಗಿರುವುದಿಲ್ಲ.

ಭಾರತದ ಅನೇಕ ವಿಶಿಷ್ಟತೆಗಳ ಕಾರಣದಿಂದಾಗಿಯೇ ದೇಶದ ಸಂವಿಧಾನವನ್ನು ರಚಿಸಲಾಗಿದೆ. ಸಂವಿಧಾನವು ದೇಶದಲ್ಲಿರುವ ಎಲ್ಲ ಧರ್ಮಗಳನ್ನು ಸಮಾನತೆಯಿಂದ ಕಾಣುತ್ತದೆ. ಪ್ರಭುತ್ವವು ಯಾವುದೇ ಒಂದು ಧರ್ಮದ ಪ್ರತಿಪಾದಕವಾಗಲಿ, ಸಮರ್ಥವಾಗಿಯಾಗಲಿ ಇರುವುದಿಲ್ಲ. ಎಲ್ಲ ಧರ್ಮೀಯರನ್ನೂ ಒಳಗೊಂಡ ಗಣರಾಜ್ಯವಾಗಿರುತ್ತದೆ. ಗಣರಾಜ್ಯದ ಹೂರಣವಾಗಿ ಪ್ರಜಾರಾಜ್ಯವಿರುತ್ತದೆ. ಆದ್ದರಿಂದಲೇ ಭಾರತವನ್ನು "ಸರ್ವ ಜನಾಂಗದ ಶಾಂತಿಯ ತೋಟ" ಎಂದು ರಾಷ್ಟ್ರಕವಿ ಕುವೆಂಪು ಹಾಡಿದ್ದಾರೆ. ಇದೊಂದು ಕೇವಲ ರಾಜಕೀಯ ವಿಷಯವಾಗದೆ ದೇಶದ ಜನಜೀವನದ ಅವಿಭಾಜ್ಯ ಅಂಗವಾಬೇಕೆಂದೆ ಮಹಾತ್ಮಾಗಾಂಧಿಯವರು ೬೦ವರ್ಷಗಳ ಕಾಲ ಅಹರ್ನಿಷಿ ದುಡಿದಿದ್ದಾರೆ. ಅವರ ದುಡಿಮೆಯ ತಪಸ್ಸಿನ ಫಲವಾಗಿಯೇ ಜಗತ್ತಿನ ರಾಷ್ಟ್ರಗಳ ಸಮೂಹದಲ್ಲಿ ಅದ್ವಿತೀಯವಾದ ಸಂವಿದಾನ ಹೊಂದಿದ ದೇಶ ಭಾರತವಾಗಿದೆ. ಅಂಥ ಸಂವಿಧಾನ ಅನುಷ್ಠಾನಕ್ಕೆ ಬಂದು ೬೪ವರ್ಷಗಳಾದವು. ಸಂವಿಧಾನವನ್ನು ರಚಿಸಿ ನಮಗೆ ನಾವೆ ಅರ್ಪಿಸಿಕೊಂಡಿದ್ದೇವೆ. ಆದರೆ ಅದರಲ್ಲಿ ನಾವೆ ಬರೆದುಕೊಂಡಿರುವ ಆಶಯವನ್ನು ರಾಷ್ಟ್ರದ ಜನ ಜೀವನದಲ್ಲಿ ತರಲು ಇನ್ನೂ ಸಫಲರಾಗಿಲ್ಲ. ಇದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದನೆಯದು ದೇಶದ ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ದೇಶದ ಪ್ರಭುಗಳಾಗಲಿಲ್ಲ. ಇಂಗ್ಲೀಷರ ಆಡಳಿತದ ಕಾಲದಲ್ಲಿದ್ದಂತೆಯೇ ಸ್ವತಂತ್ರ ಭಾರತದಲ್ಲಿ ಕೂಡ ಪ್ರಜೆಗಳು ಪ್ರಭುತ್ವದ ಸ್ವಾಮಿನಿಷ್ಠೆಯನ್ನು ಉಳಿಸಿಕೊಂಡರೆ ವಿನಃ ಬದಲಾದ ರಾಜಕೀಯ ಸನ್ನಿವೇಶದಲ್ಲಿ ತಮ್ಮ ಅಸ್ಮಿತೆಯನ್ನು ಬೆಳೆಸಿಕೊಳ್ಳಲಿಲ್ಲ. ಎರಡನೆಯದು ಪ್ರಭುತ್ವದ ಮೇಲೆ ಅಂಕುಶವನ್ನಿಡಬೇಕಾಗಿದ್ದ ಪ್ರಜೆಗಳು ಪ್ರಭುತ್ವದ ಅತಿಯಾದ ನಿಯಂತ್ರಣಕ್ಕೆ ಗುರಿಯಾಗಬೇಕಾಯಿತು. ರಾಜಕೀಯ ಪಕ್ಷಗಳ ಮೇಲಾಟ ಪ್ರಾರಂಭವಾಯಿತು. ಅಧಿಕಾರದಲ್ಲಿ ಮುಂದುವರೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರಭುತ್ವ ತನ್ನ ಹಿತಕ್ಕಾಗಿ ಮತ ಬ್ಯಾಂಕನ್ನು ನಿರ್ಮಿಸಲು ಪ್ರಾರಂಭಿಸಿತು. ಧರ್ಮ, ಜಾತಿ, ಭಾಷೆ, ಪ್ರಾದೇಶಿಕತೆ ಮುಂತಾದವುಗಳ ಆಧಾರದ ಮೇಲೆ ಮತದಾರರನ್ನು ಓಲೈಸುವ ಪ್ರಕ್ರಿಯೆ ಪ್ರಾರಂಭವಾಯಿತು. ಉಂಟಾಗಬೇಕಿದ್ದ ಪ್ರಬಲ ಲೋಕಶಕ್ತಿ ಇದರಿಂದಾಗಿ ಉಂಟಾಗದೇ ಹೋಯಿತು. ಹೀಗೆ ರಾಜಕಾರಣದಿಂದಾಗಿ ಸಂವಿದಾನದ ಮೂಲ ಆಶಯವಾದ ಸರ್ವಧರ್ಮ ಸಮಾನತಾಭಾವ ದೇಶದಲ್ಲಿ ಇದುವರೆಗು ಉಂಟಾಗಿಲ್ಲ.

ಸದ್ಯದ ಸರ್ಕಾರದ ನಿಲುವು ಸ್ಪಷ್ಟವಾಗಿಲ್ಲ. ನಡೆಯುತ್ತಿರುವ ಮತಾಂತರದ ಬಗ್ಗೆ ದೇಶದ ಪ್ರಧಾನಮಂತ್ರಿ ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ. ಪ್ರತಿಪಕ್ಷಗಳು ಒತ್ತಾಯ ಮಾಡಿದರು ಪ್ರಧಾನಮಂತ್ರಿ ಲೋಕಸಭೆಗೆ ಬರಲಿಲ್ಲ ಮತ್ತು ಸ್ಪಷ್ಟನೆ ನೀಡಲಿಲ್ಲ. ಎಲ್ಲಿಯವರೆಗೆ ಪ್ರಭುತ್ವ ಧರ್ಮದ ಜೊತೆಗೆ ಕಣ್ಣುಮುಚ್ಚಾಲೆ ಆಡುತ್ತಿರುತ್ತದೊ ಅಲ್ಲಿಯವರೆಗೆ ದೇಶದಲ್ಲಿ ಧರ್ಮಾಂತರ ಮತ್ತು ಧರ್ಮಾಂಧತೆ ತಪ್ಪುವುದಿಲ್ಲ. ಓರ್ವ ಚಿಂತಕ ಹೇಳಿರುವಂತೆ ಯಾವುದೇ ಧರ್ಮದವರಾಗಿರಲಿ ದೇಶದ ಪ್ರಜೆಗಳಾದ ಅವರು ಪ್ರಜಾಪ್ರಭುತ್ವದ ವ್ಯವಸ್ಥೆಗೇ ತಮ್ಮನ್ನು ಮತಾಂತರಗೊಳಿಸಿಕೊಳ್ಳಬೇಕು. ಮತಾಂಧತೆ ಎಂಬುದು ಧರ್ಮದ ಬಗ್ಗೆ ಇರುವ ಅಜ್ಞಾನದ ಪರಾಕಾಷ್ಠತೆ. ಭಾರತದ ನೆರೆ ರಾಷ್ಟ್ರವಾದ ಪಾಕಿಸ್ತಾನ ತನ್ನ ಧರ್ಮಾಂಧತೆಯನ್ನು ಬಿಟ್ಟು ಸರ್ವಧರ್ಮ ಸಹಿಷ್ಣುತೆಯ ನಾಡಾಗಿ ಪರಿವರ್ತನೆಗೊಳ್ಳಬೇಕಾದುದು ತುಂಬಾ ಅಗತ್ಯವಾಗಿದೆ. ಎಲ್ಲಿಯವರೆಗೆ ಪಾಕಿಸ್ತಾನ ಮತ್ತು ಇತರ ಧರ್ಮೀಯ ದೇಶಗಳು ಧರ್ಮಾಂಧತೆಯನ್ನು ತೊರೆಯುವುದಿಲ್ಲವೊ ಅಲ್ಲಿಯವರೆಗೆ ದಕ್ಷಿಣ ಏಷ್ಯಾದ ದೇಶಗಳಲ್ಲಿ ಮತಾಂತರದ ಪಿಡುಗು ಇರುತ್ತದೆ. ಉಪನಿಷತ್ತುಗಳು ಹೇಳಿರುವ ಮಾತು ಇಲ್ಲಿ ಅನ್ವಯವಾಗುತ್ತದೆ. ಯಾವ ಗ್ರಂಥಗಳದು ಅತ್ಯಂತ ಉಪಕಾರವೆಂದು ನಾವು ಮಾನ್ಯಮಾಡುತ್ತೇವೊ ಅವುಗಳನ್ನೂ ಕೂಡ ವಿಸರ್ಜನೆ ಮಾಡದೆ ಜ್ಞಾನ ಉಂಟಾಗುವುದಿಲ್ಲ. ವೇದಾನ್ ಅಪಿ ಸನ್ಯಸತಿ. ಧರ್ಮ ಗ್ರಂಥಗಳನ್ನು ಬಿಡದ ಹೊರತಾಗಿ ಅಸೀಮವರೆಗೆ ತಲುಪಲು ಸಾಧ್ಯವಿಲ್ಲ. ಒಂದು ಸೀಮೆಯಲ್ಲಿಯೇ ಉಳಿದು ಬಿಡುವೆವು. ಒಂದು ಅರ್ಥದಲ್ಲಿ ವೇದಗಳ ಅಂತ. ವೇದಾಂತ ಎಂದರೆ ಕುರಣಾಂತ. ವೇದಾಂತ ಎಂದರೆ ಬೈಬಲಾಂತ. ವೇದಾಂತ ಎಂದರೆ ಪುರಣಾಂತ. ಎಲ್ಲ ಗ್ರಂಥಗಳ ಸಮಾಪ್ತಿ. ಇಂಥ ತಿಳುವಳಿಕೆಯನ್ನು ಉಂಟುಮಾಡುವ ಕೆಲಸವನ್ನು ದೇಶದಲ್ಲಿಯ ಎಲ್ಲ ಧರ್ಮಗಳ ಗುರುಗಳು, ಮುಲ್ಲಾಗಳು, ಬಿಷಪ್‌ಗಳು ಮಾಡಬೇಕಿದೆ. ಶಿಕ್ಷಣದ ವ್ಯವಸ್ಥೆಯೊಂದೆ ಮತಾಂತರ ಮತ್ತು ಧರ್ಮಾಂಧತೆಯನ್ನು ತಪ್ಪಿಸಬಲ್ಲದೆ ಹೊರತು ಕಾನೂನುಗಳಿಂದ ಮತ್ತು ಪ್ರತಿಭಟನೆಗಳಿಂದ ನಿಲ್ಲಿಸುವುದು ಕಷ್ಟ ಸಾಧ್ಯ.

ಸನ್ಮಾನ, ಬಹುಮಾನ ಮತ್ತು ಸಮಾಜಸೇವೆ

- ಸುರೇಂದ್ರ ಕೌಲಗಿ

ಮಾನ್ಯ ಜಗದ್ಗುರು ಶ್ರೀ.ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳೇ, ಪ್ರೊ.ಷ.ಶೆಟ್ಟರ್‌ರವರೇ, ಡಾ.ಬೋರೇಗೌಡ ಚಿಕ್ಕಮರಳಿರವರೇ, ಡಾ.ಹೆಚ್.ಎಸ್. ಗೋಪಾಲರಾವ್ ಅವರೇ, ಶ್ರೀ ವನಮಾಲಿ ಚಾರಿಟೆಬಲ್ ಟ್ರಸ್ಟ್‌ನ ಸದಸ್ಯರೇ, ಉಪಸ್ಥಿತರಿರುವ ಸಹೃದಯಿಗಳೇ, ತಮ್ಮೆಲ್ಲರ ಸಮ್ಮುಖದಲ್ಲಿ ಭಾರತೀಯ ವಿದ್ಯಾಭವನ ಮತ್ತು ತಮ್ಮ ವಿದ್ವತ್ತಿನ ಮೂಲಕ ಮನ್ನಣೆಗಳಿಸಿದ ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿಯವರ ಹೆಸರಿನಲ್ಲಿ ಸ್ಥಾಪನೆಗೊಂಡಿರುವ ಪ್ರಶಸ್ತಿಯನ್ನು ಜಗದ್ಗುರು ಶಿವರಾತ್ರಿ ಮಹಾಸ್ವಾಮಿಗಳಂಥವರ ಸಾನಿಧ್ಯದಲ್ಲಿ ಪಡೆಯುತ್ತಿರುವುದಕ್ಕೆ ಸಂತಸದೊಂದಿಗೆ ಹೆಮ್ಮೆಯೂ ಅನಿಸುತ್ತದೆ. ಪ್ರೊ.ಷ.ಶೆಟ್ಟರ್‌ರವರಂಥ ಖ್ಯಾತ ಇತಿಹಾಸಜ್ಞರು ಮತ್ತು ಹಿರಿಯ ಸಂಶೋಧಕರೊಂದಿಗೆ ವೇದಿಕೆ ಹಂಚಿಕೊಂಡು ಪ್ರಶಸ್ತಿ ಪಡೆಯುತ್ತಿರುವುದಕ್ಕೆ ಹೆಚ್ಚಿನ ಸಂತೋಷವೆನಿಸುತ್ತದೆ.

ಪ್ರಶಸ್ತಿ ಸ್ವೀಕರಿಸುವಾಗ ನನ್ನ ಮುಂದೆ ಬಂದ ಪ್ರಶ್ನೆ ಏನೆಂದರೆ, ಓರ್ವ ಸಾರ್ವಜನಿಕ ಕಾರ್ಯಕರ್ತನಾಗಿ ಮತ್ತು ತಾನು ಮಾಡಿದ ಅಳಿಲು ಸೇವೆಗಾಗಿ ಪ್ರತಿಫಲವೋ ಎಂಬಂತೆ ವಿತ್ತ ಮೌಲ್ಯದೊಂದಿಗಿರುವ ಪ್ರಶಸ್ತಿ ಸ್ವೀಕರಿಸುವುದು ಎಷ್ಟರ ಮಟ್ಟಿಗೆ ಉಚಿತ ಎಂಬುದು.

ದೇಶದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನ ಅರ್ಪಿಸಿದ ಅನೇಕ ಮಹಾನುಭಾವರು ಯಾವ ಫಲಾಪೇಕ್ಷೆ ಇಟ್ಟುಕೊಂಡಿರಲಿಲ್ಲ ಮತ್ತು ಯಾವ ಸನ್ಮಾನ ಪಡೆದಿರಲಿಲ್ಲ. ಅಂಥವರ ಸಂಖ್ಯೆ ಗಣನೀಯವಾಗಿದೆ. ನನ್ನ ಸಮಕಾಲೀನರಲ್ಲಿಯೇ ಅನೇಕ ದೇಶ ಸೇವಕರು ಸನ್ಮಾನ ಪಡೆಯಲಿಚ್ಛಿಸದೇ ಜೀವನ ಪೂರ್ತಿ ಸೇವೆ ಮಾಡಿದವರ ಉದಾಹರಣೆಗಳು ಇವೆ. ಯಾರ ವಿಚಾರದಲ್ಲಿ ನನಗೆ ನಂಬಿಕೆ ಮತ್ತು ಶ್ರದ್ಧೆ ಇದೆಯೊ ಆ ಮೋಹನದಾಸ್ ಕರಮಚಂದ ಗಾಂಧಿ ತಮ್ಮ ನಾಲ್ಕು ದಶಕಗಳ ಸೇವೆಯ ನಂತರವೂ ಯಾವ ಪ್ರಶಸ್ತಿಯನ್ನು ಪಡೆಯಲು ಇಚ್ಛಿಸಲಿಲ್ಲ. ಬದಲಿಗೆ ಸತ್ಯಶೋಧಕ ಧೂಳುಕಣಕ್ಕಿಂತ ಹೆಚ್ಚು ನಮ್ರನಾಗಿರಬೇಕು. ಲೋಕವು ಧೂಳಿನ ಕಣವನ್ನು ಕಾಲಕೆಳಗೆ ತುಳಿಯುತ್ತದೆ. ಆದರೆ ಸತ್ಯಶೋಧಕ ಧೂಳಿನ ಕಣದಿಂದಲೂ ತುಳಿಸಿಕೊಳ್ಳುವಷ್ಟು ನಮ್ರನಾಗಿರಬೇಕು ಎಂದು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಧೂಳಿನ ಕಣದಷ್ಟು ನಮ್ರನಾಗಿರಬೇಕಾದ ಸಮಾಜ ಸೇವಾ ಕಾರ್ಯಕರ್ತ ಯಾವುದೇ ಪ್ರಶಸ್ತಿಯ ಪಡೆಯುವುದು ಅನುಚಿತವೆನಿಸುತ್ತದೆ.

ನನ್ನ ಯುವಾವಸ್ಥೆಯಲ್ಲಿ ಶಿವರ್ಷಗಳಷ್ಟು ದೀರ್ಘಕಾಲ ತುಂಬ ನಿಕಟವಾಗಿದ್ದುಕೊಂಡು ಯಾರ ಸೇವೆಯನ್ನು ಮಾಡಿದೆನೋ ಜಯಪ್ರಕಾಶ್

ನಾರಾಯಣ್‌ರವರು ದೇಶ ಕಳೆದುಕೊಳ್ಳುತ್ತಿದ್ದ ಪ್ರಜಾಪ್ರಭುತ್ವವನ್ನು ಪುನಃ ಗಟ್ಟಿಯಾಗಿ ನೆಲೆ ನಿಲ್ಲಿಸಿದರು. ಅವರು ಯಾವ ಪ್ರಶಸ್ತಿಯನ್ನೂ ಪಡೆಯಲಿಲ್ಲ. ಪಡೆದಿದ್ದ ಮೆಗ್ಸಾಸಿ ಪ್ರಶಸ್ತಿಯ ಹಣವನ್ನು ದೇಶಸೇವೆಗಾಗಿ ಕೊಟ್ಟರು. ಉಪ ಪ್ರಧಾನಿಯ ಸ್ಥಾನ ಅವರನ್ನು ಹುಡುಕಿಕೊಂಟು ಬಂದಾಗ ಅದನ್ನು ನಿರಾಕರಿಸಿ ದೇಶಸೇವೆಗಾಗಿ ತಮ್ಮ ಜೀವನವನ್ನೇ ಸಂತ ವಿನೋಬಾಗೆ ದಾನವಾಗಿ ಕೊಟ್ಟವರು. ಸಮಾಜದ ಸರ್ವತೋಮುಖ ಏಳಿಗೆಯಾಗಬೇಕಾದರೆ ಸಂಪೂರ್ಣ ಕ್ರಾಂತಿ ಆಗಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದರು, ಅವರ ನೆರಳಿನಲ್ಲಿ ಬೆಳೆದು ಅವರ ಉದ್ದೇಶವನ್ನು ಕಿಂಚಿತ್ತಾದರೂ ನೆರವೇರಿಸಬೇಕೆಂಬ ಹಂಬಲವಿದ್ದರು ನೆರವೇರಿಸಲು ಅಸಮರ್ಥನಾಗಿರುವ ಸಾಮಾನ್ಯ ಕಾರ್ಯಕರ್ತನಾದ ನಾನು ಪ್ರಶಸ್ತಿಯನ್ನು ಪಡೆಯುವುದು ಸಮಂಜಸವೆನಿಸುವುದಿಲ್ಲ. ವನಮಾಲಿ ಪ್ರಶಸ್ತಿಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಈ ಎಲ್ಲ ಯೋಚನೆಗಳು ಬಂದು ಸಹೃದಯಿಗಳಾದ ತಮ್ಮೆಲ್ಲರೊಂದಿಗೆ ಹಂಚಿಕೊಳ್ಳುವ ಪ್ರಯತ್ನಮಾಡಿ ಹೃದಯದ ಭಾರವನ್ನು ಕಡಿಮೆಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಈ ಎಲ್ಲ ಮಾತುಗಳು ತುಂಬ ವ್ಯಕ್ತಿಗತವಾದುದೆಂದು ಮತ್ತು ಅನುಚಿತವಾದುದೆಂದು ಅನಿಸಿದರೆ ವಿಷಾದಿಸುತ್ತೇನೆ.

ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಸಮಯದಲ್ಲಿ ಆಗುತ್ತಿರುವ ಸಂತೋಷ ಬಹಿರಂಗವಾದುದು. ಅಂತರಂಗದಲ್ಲಿ ತುಂಬಾ ವಿಷಾದವಿದೆ. ಯಾವ ಸಮಾಜಸೇವೆಯ ಸಲ್ಲಿಕೆಯ ನಿಮಿತ್ತವಾಗಿ ಡಾ.ಮತ್ತೂರು ಕೃಷ್ಣಮೂರ್ತಿ ಗೌರವ ಪ್ರಶಸ್ತಿ ಪ್ರಾಪ್ತವಾಗುತ್ತಿದೆಯೊ ಅಂಥ ಸಮಾಜ ಸೇವೆಗಳನ್ನು ನಿರರ್ಥಕಗೊಳಿಸುವಂಥ ಘಟನೆಗಳು ಸಮಾಜದಲ್ಲಿ ನಡೆಯುತ್ತಿವೆ. ಇತ್ತೀಚೆಗೆ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಅತ್ಯಾಚಾರಗಳಿಗೆ ನಿಜವಾದ ಕಾರಣವೇನು ಎಂಬುದನ್ನು ಗುರುತಿಸಲು ಸಮಾಜ ವಿಫಲವಾಗಿದೆ. ಅತ್ಯಾಚಾರವೆಂಬುದು ನಿಮಿತ್ತ ಮಾತ್ರವಾಗಿ ಕಾಣುವ ಘಟನೆಗಳು. ಇಂಥ ಘಟನೆಗಳು ಸಮಾಜದ ಒಟ್ಟಾರೆ ಆರೋಗ್ಯ ಕೆಟ್ಟಿರುವ ಸೂಚನೆ. ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರಭುತ್ವಕ್ಕೆ ಯೋಗ್ಯವಾಗುವಂಥ ಸಮಾಜದ ನಿರ್ಮಾಣಕ್ಕಾಗಿ ಯಾವ ಪರಿಣಾಮಕಾರಿ ಪ್ರಯತ್ನಗಳೂ ನಡೆಯಲಿಲ್ಲ. ದೇಶದ ಭೌತಿಕ ಪ್ರಗತಿಗಾಗಿ ಯೋಜನಾ ಆಯೋಗದ ರಚನೆಯಾಯಿತು ಮತ್ತು ಪಂಚವಾರ್ಷಿಕ ಯೋಜನೆಗಳ ಸರಮಾಲೆ ಶುರುವಾಯಿತು. ಈ ಭೌತಿಕ ಬೆಳವಣಿಗೆಯ ಪ್ರಯತ್ನಕ್ಕೆ ಸರಿಸಮನಾಗಿ ಸಮಾಜದಲ್ಲಿ ನೈತಿಕ ಮೌಲ್ಯಗಳ ವರ್ಧನೆಗಾಗಿ ಯಾವ ಪ್ರಯತ್ನವೂ ನಡೆಯಲಿಲ್ಲ. ಶೈಕ್ಷಣಿಕ ಕಾರ್ಯಕ್ರಮಗಳು ನೈತಿಕ ಮೌಲ್ಯ ವರ್ಧನೆಗೆ ಕಾರಣವಾಗಬಹುದಾಗಿತ್ತು. ಆದರೆ ಅವು ಕೂಡ ಸಮಾಜದ ಭೌತಿಕ ಬೆಳವಣಿಗೆಗೆ ಪೂರಕವಾಗುವಂತೆ ರೂಪಿತಗೊಂಡಿತೆ ವಿನಃ ನೈತಿಕ ಮೌಲ್ಯಗಳನ್ನು ಸ್ಥಾಪಿಸುವಂಥ ಕಾರ್ಯಕ್ರಮ ಅದಾಗಲಿಲ್ಲ. ಇವೆಲ್ಲದರ ಪರಿಣಾಮವಾಗಿ ಸಾಮಾನ್ಯ ಸಮಾಜದಲ್ಲಿಯೂ, ಶೈಕ್ಷಣಿಕ ಸಂಸ್ಥೆಗಳಲ್ಲಿಯೂ, ಸಂಘ ಸಂಸ್ಥೆಗಳಲ್ಲಿಯೂ, ಆಡಳಿತ ಕ್ಷೇತ್ರದಲ್ಲಿಯೂ, ಹೊಲಗದ್ದೆ,

ಕಾರ್ಖಾನೆಗಳಲ್ಲಿಯೂ, ಅಷ್ಟೇ ಏಕೆ ಕುಟುಂಬಗಳಲ್ಲಿಯೂ ಮಹಿಳೆಯರ ಮೇಲಿನ ದೌರ್ಜನ್ಯದ ಪಿಡುಗು ವ್ಯಾಪಿಸಿದೆ. ಮಹಾತ್ಮಾ ಗಾಂಧೀಜಿ ಸ್ವಾತಂತ್ರ್ಯ ಬಂದ ಕೂಡಲೇ ಭಾರತದ ಶಿಕ್ಷಣ ಪದ್ಧತಿಯು ನವನವೀನವಾಗಬೇಕೆಂದು ಬಯಸಿದ್ದರು. ಅದನ್ನು ಅವರು "ಜೀವನ ಶಿಕ್ಷಣ" ಎಂದು ಕರೆದಿದ್ದರು. ಜೀವನಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಶ್ರಮಾಧಾರಿತವಾಗಿ ಕಲಿಸುವುದರ ಮೂಲಕ ಹೊಸ ಮನುಷ್ಯನನ್ನು ಸೃಷ್ಟಿಸುವ ಉದ್ದೇಶ ಈ ಜೀವನ ಶಿಕ್ಷಣದ ಗುರಿಯಾಗಿತ್ತು. ಆದರೆ ದೇಶ ಇಂಥ ಜೀವನ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳಲೇ ಇಲ್ಲ. ತತ್‌ಪರಿಣಾಮವಾಗಿ ನವ ಭಾರತದ ತರುಣರು ನಿರುದ್ಯೋಗಿಗಳು, ದಿಶಾಹೀನರು, ಭ್ರಮಿತರು ಆಗಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯವನ್ನು ಕೇವಲ ಲೈಂಗಿಕಾಸಕ್ತಿಯಿಂದ ಜನಿತವಾದ ಪಿಡುಗೆಂದು ಭಾವಿಸದೆ ಅದೊಂದು ಸಮಾಜದಲ್ಲಿರಬೇಕಾದ ಸಜ್ಜನ ಶಕ್ತಿ ಮತ್ತು ನೈತಿಕ ಶಕ್ತಿಗೆ ಸವಾಲೆಂದು ಸ್ವೀಕರಿಸಬೇಕು. ಸಮಾಜದ ಯಾವುದೇ ಕ್ಷೇತ್ರದಲ್ಲಿರುವ ಸಜ್ಜನರು ತಾವಿರುವ ಸ್ಥಳದ ಪರಿಸರ ಶುದ್ಧವಾಗಿರುವಂತೆ ಕಾಳಜಿವಹಿಸಬೇಕು. ರಾಜ್ಯಶಕ್ತಿಯೂ ಸಹ ಕೈಗೂಡಿಸಬೇಕು. ರಾಜ್ಯಶಕ್ತಿ ಮತ್ತು ಸಜ್ಜನಶಕ್ತಿ ಒಂದುಗೂಡಿ ಹೋರಾಟ ಮಾಡಿದಾಗ ಮಾತ್ರ ಮಹಿಳಾ ದೌರ್ಜನ್ಯದಂಥ ಪಿಡುಗನ್ನು ತಪ್ಪಿಸಬಹುದು. ಆ ನಿಟ್ಟಿನಲ್ಲಿ ರಚನಾತ್ಮಕ ಕೆಲಸ ನಡೆಯಲೆಂದು ಹಾರೈಸುತ್ತೇನೆ.

ಭಾರತ ಬಿಟ್ಟು ತೊಲಗಿ ಮತ್ತು ಇತರ ರಾಷ್ಟ್ರೀಯ ಹೋರಾಟಗಳ ಮತ್ತು ಅನೇಕ ನಾಯಕರ ತ್ಯಾಗ ಬಲಿದಾನಗಳ ಕಾರಣದಿಂದಾಗಿ ದೇಶ ಸ್ವಾತಂತ್ರ್ಯ ಪಡೆಯಿತು. ಆದರೆ ದೇಶದಲ್ಲಿಯ ಸಮಾಜದ ರಚನೆ ಯಾವ ರೀತಿ ಆಗಬೇಕು ಎಂಬುದರ ಬಗ್ಗೆ ಚಿಂತನೆ ನಡೆಯಲಿಲ್ಲ. ಒಂದು ಸಾಮಾನ್ಯ ಮನೆ ಕಟ್ಟಬೇಕಾದರೆ ಹತ್ತಾರು ನೀಲ ನಕ್ಷಗಳನ್ನು ತಯಾರಿಸುವ ನಾವು ದೇಶ ಕಟ್ಟಲು ಬೇಕಾದ ನೀಲ ನಕ್ಷೆಯನ್ನು ತಯಾರಿಸಲು ಸಾಧ್ಯವಾಗಲಿಲ್ಲ. ಇಂದು ರಚಿತವಾಗುತ್ತಿರುವ ಸಮಾಜದ ರೂಪ ರೇಶೆಗಳೇನು ಎಂಬುದು ಸರಿಯಾಗಿ ಯಾರಿಗೂ ಗೊತ್ತಿಲ್ಲ. ಕೇವಲ ಭೌತಿಕ ಬೆಳವಣಿಗೆಯನ್ನೇ ಅಭಿವೃದ್ಧಿಯೆಂದು ಭಾವಿಸುತ್ತ ಅದರ ಬೆನ್ನು ಹತ್ತಿದ್ದೇವೆ. ಸಾಮ್ಯವಾದ, ಸಮಾಜವಾದ, ನಕ್ಸಲ್‌ವಾದ, ಬಂಡವಾಳವಾದ ಮುಂತಾದವುಗಳೆಲ್ಲ ತಮ್ಮ ಉದ್ದೇಶಿತ ಸಮಾಜ ರಚನೆಯನ್ನು ಮಾಡಲು ವಿಫಲವಾಗಿವೆ. ಗಾಂಧಿಜಿಯವರು ಪ್ರತಿಪಾದಿಸಿದ ಸರ್ವೋದಯ ವಿಚಾರವೊಂದೆ ಹೊಸ ಸಮಾಜ ರಚನೆಗೆ ನೀಲ ನಕ್ಷೆಯಾಗಬಲ್ಲದು. ಅಂಥ ನೀಲನಕ್ಷೆಯನ್ನು ತಯಾರಿಸಲು ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಸೇರಿ ಪ್ರಯತ್ನಿಸಲಿ ಎಂಬ ಮಹದಾಸೆಯೊಡನೆ ಮತ್ತು ಗಾಂಧಿಜಿಯವರಿಗೆ ಪ್ರಿಯವಾಗಿದ್ದ "ರಾಜ್ಯ ಮೋಹವು ಎನಗೆ ಇಲ್ಲವು ಸ್ವರ್ಗದಾಸೆಯೆ ಇಲ್ಲವು। ಮತ್ತೆ ಜನ್ಮವ ಪಡೆಯಬೇಕೆಂಬಿಚ್ಛೆಯೇ ಎನಗಿಲ್ಲವು॥ ದುಃಖಿಗಳ ಕಂಬನಿಗಳೆಲ್ಲ ನಶಿಸಲಿ। ಆರ್ತನಾದಗಳೆಲ್ಲವಳಿಯಲಿ, ಇದುವೆ ನನ್ನಯ ಬಯಕೆಯು॥" ಎಂಬ ಈ ಪ್ರಾರ್ಥನೆಯೊಂದಿಗೆ ಪದ್ಮಶ್ರೀ ಮತ್ತೂರು ಕೃಷ್ಣಮೂರ್ತಿ ಪ್ರಶಸ್ತಿ ಸ್ವೀಕರಿಸುತ್ತೇನೆ. ಎಲ್ಲರಿಗೂ ಕೃತಜ್ಞತೆಗಳು.

ಸುಗಮ ಚಾಲನೆ

– ಡಾ.ಬೋರೇಗೌಡ ಚಿಕ್ಕಮರಳಿ

ಏಳುತಲೆ ಎದ್ದು ಯಾರ‍್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳಿಯೋಳ । ಭೂಮಿತಾಯ ।
ಎದ್ದೊಂದು ಗಳಿಗೆ ನೆನೆವೇನು ॥

ಭೂಮಿತಾಯಿಯ ಒಡಲಿನಲ್ಲಿ ತನ್ನ ಬದುಕನ್ನು ಕಂಡುಕೊಂಡ ಬೇಸಾಯಗಾರ ತನ್ನ ದೈನಂದಿನ ಕೆಲಸಕಾರ್ಯಗಳಿಗೆ ಸುಗಮ ಚಾಲನೆಯನ್ನು ಕೊಡಲು ಹಾಡಿಕೊಳ್ಳುವ ಪ್ರಾರ್ಥನೆ ಈ ಜನಪದ ತ್ರಿಪದಿ. ಇಡೀ ದಿವಸದ ಅವನ ಶ್ರಮಕ್ಕೆ ಸ್ಫೂರ್ತಿಯನ್ನು ಚೈತನ್ಯವನ್ನು ಕೊಡುವ ಶಕ್ತಿ ಈ ಪ್ರಾರ್ಥನೆ. ಯಾವುದೇ ಕಂದಾಚಾರವಿಲ್ಲದ ಶುದ್ಧ ಆಧ್ಯಾತ್ಮದ ನೆಲೆ ಇಲ್ಲಿದೆ. ಇಂತಹುದೊಂದು ಸ್ಫೂರ್ತಿದಾಯಕ ಚಾಲನೆ ನಮ್ಮ ಎಲ್ಲ ಕೆಲಸಕಾರ್ಯಗಳಿಗೆ ಅಗತ್ಯವಿದೆ. ಯಾಕೆಂದರೆ ನಾವು ಕೈಗೊಂಡ ಯಾವುದೇ ಕೆಲಸ ಯಾವ ಅಡ್ಡಿ ಆತಂಕಗಳೂ ಇಲ್ಲದೆ ಮುಂದುವರಿಯಲು ಕೆಲಸ ಮಾಡುವವರ ಮನಃಸ್ಥಿತಿ ಬಹಳ ಮುಖ್ಯ. ಕೈಹಿಡಿದ ಕೆಲಸ ಮುಂದುವರಿಯಬೇಕು, ಫಲದಾಯಕವಾಗಿ ಮುಕ್ತಾಯಗೊಳ್ಳಬೇಕು. ಅದಕ್ಕಾಗಿ ಕೆಲಸದಲ್ಲಿ ತೊಡಗಿಕೊಳ್ಳುವ ನಾವು ನಮ್ಮ ಮನಸ್ಸನ್ನು ಹದಗೊಳಿಸಿಕೊಳ್ಳಬೇಕು. ಈ ಹದ ನಾವು ಕೈಗೊಂಡ ಕೆಲಸಗಳಿಗೆ ಕೊಡುವ ಇಂತಹ ಚಾಲನೆಯಿಂದ ಸಾಧ್ಯವಾಗುತ್ತದೆ.

ಒಳ್ಳೆಯ ಆರಂಭ ಒಳ್ಳೆಯ ಮುಕ್ತಾಯವನ್ನು ತರುತ್ತದೆ ಎಂಬ ನಂಬಿಕೆಯೂ ಉಂಟು. ಇದು ಅನುಭವಜನ್ಯವಾದ ಅಭಿಪ್ರಾಯವೂ ಆಗಿರಬಹುದು. ಈ ನಂಬಿಕೆ ಅಥವ ಅಭಿಪ್ರಾಯ ಇರುವುದರಿಂದಲೇ ಇರಬೇಕು ನಮ್ಮ ಅದೆಷ್ಟೋ ಕೆಲಸಗಳಿಗೆ ಮೊದಲಲ್ಲಿ ಶುಭಾರಂಭವನ್ನು ಬಯಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಇಂತಹ ಚಾಲನೆಗಳು ಕೆಲವೊಮ್ಮೆ ಆಚರಣಾತ್ಮಕವಾಹುವುದೂ ಉಂಟು. ಇಂತಹ ಆಚರಣೆಗಳು ಕೆಲವು ಒಂದೇ ಬಗೆಯ ಸಂದರ್ಭಗಳಲ್ಲಿ ಒಂದೇ ರೀತಿಯಲ್ಲಿ ಆಚರಿಸಲ್ಪಟ್ಟು ಸಾಂಪ್ರದಾಯಿಕತೆಯ ಲಕ್ಷಣವನ್ನು ಪಡೆದುಕೊಂಡಿರುವುದೂ ಉಂಟು. ಮನೆ ಕಟ್ಟುವ ಅಥವಾ ಯಾವುದೇ ಬಗೆಯ ಕಾಮಗಾರಿಯನ್ನು ಆರಂಭಿಸುವ ಮೊದಲು 'ಗುದ್ದಲಿಪೂಜೆ' ಯನ್ನು ಆಚರಿಸುತ್ತೇವೆ. ರೈತರು ತಾವು ಬೆಳೆದ ಬೆಳೆಯ ಒಕ್ಕಣೆ ಕಾರ್ಯವನ್ನು ಆರಂಭಿಸುವ ಮೊದಲು ಕಣದ ಮಧ್ಯದಲ್ಲಿ ಪಿಳ್ಳಾರಿಯನ್ನಿಟ್ಟು

ಪೂಜಿಸುತ್ತಾರೆ. ಇಂತಹ ಆಚರಣೆಗಳ ಆಶಯ ಸುಗುಮ ಚಾಲನೆ ಎಂಬುದೇನೊ ಸರಿ. ಆದರೆ ಇಂತಹ ಆಚರಣೆಗಳಿಗೆ ಹಿನ್ನೆಲೆಯಾಗಿ ಬೌದ್ಧಿಕ ಜಾಗೃತಿ ಕೆಲಸ ಮಾಡದೆಹೋದರೆ ಮೌಢ್ಯ ತಲೆಹಾಕುತ್ತದೆ. ಮೌಢ್ಯತೆ ಬೌದ್ಧಿಕ ಸ್ವಾತಂತ್ರ್ಯವನ್ನು, ಸೃಜನಶೀಲತೆಯನ್ನು ಕಸಿದುಕೊಳ್ಳುತ್ತದೆ. ಹಾಗಾಗದಂತೆ ಎಚ್ಚರವಹಿಸಬೇಕಾದುದು ಅಗತ್ಯ. ಒಂದು ಜಾಗೃತ ಮನಃಸ್ಥಿತಿಯಲ್ಲಿ ಆಚರಿಸುವ ಕೆಲವು ಬಗೆಯ ಶುಭಾರಂಭದ ಕಾರ್ಯಕ್ರಮಗಳು ಇಂದಿನ ದಿವಸಗಳಲ್ಲಿ ತುಂಬಾ ಪ್ರಚಲಿತವಾಗಿವೆ. ಸಭೆ ಸಮಾರಂಭ ಸಮ್ಮೇಳನ ಸಂಕಿರಣಗಳನ್ನು ನಡೆಸುವಾಗ ಗಣ್ಯರು, ಪ್ರಸಿದ್ಧರು, ಪ್ರತಿಷ್ಠಿತರನ್ನು ಕರೆದು ಅದರಿಂದ ಶುಭಾರಂಭವನ್ನು ಮಾಡಿಸುವ ಕಾರ್ಯಕ್ರಮಗಳು 'ಉದ್ಘಾಟನೆ'ಯ ಹೆಸರಿನಲ್ಲಿ ಜರುಗುತ್ತದೆ. ಇವೂ ಕೆಲವೊಮ್ಮೆ ಕೇವಲ ಸಾಂಪ್ರದಾಯಿಕ ಆಚರಣೆಗಳಾಗಿಯೋ, ಬರೀ ಹೆಸರಿಗೆ ಇಲ್ಲವೇ ಸುದ್ದಿಗೆ ಮಾತ್ರವಾಗಿಯೋ ಕಾಣಿಸಿಕೊಳ್ಳುತ್ತವೆ. ಹೀಗಾಗದೆ ಒಂದು ಅರ್ಥಪೂರ್ಣ ಪ್ರಸ್ತಾವನೆಯಾಗಿ ಉದ್ಘಾಟನಾ ಕಾರ್ಯಕ್ರಮಗಳು ಜರುಗುವುದಾದರೆ ಮಾತ್ರ ಪ್ರಸ್ತುತವೆನಿಕೊಳ್ಳುತ್ತದೆ, ಮಹತ್ವ ಪಡೆದುಕೊಳ್ಳುತ್ತವೆ; ಉದ್ದೇಶಿತ ಕಾರ್ಯದ ಸುಗಮ ಚಾಲನೆಯ ಸೂಚಕವೋ ಸಂಕೇತವೋ ಆಗುತ್ತದೆ.

ಪುಸ್ತಕ ಪ್ರದರ್ಶನಾಗಾರದ ಉದ್ಘಾಟನೆ ಮಾಡಲು ಬಂದ ಗಣ್ಯರು ತಮ್ಮ ಕೆಲಸಗಳ ಅವಸರವನ್ನು ಮುಂದಿಟ್ಟು ಆತುರಾತುರವಾಗಿ ಟೇಪು ಕತ್ತರಿಸಿ, ಸಮಾರಂಭದಲ್ಲಿ ನಾಲ್ಕು ಮಾತನಾಡಿ ಹೊರಟುಬಿಟ್ಟರೆ ಅಂತಹ ಚಾಲನೆ ಸಾರ್ಥಕವೆನಿಸುವುದಿಲ್ಲ. ಆಹ್ವಾನಿತ ಗಣ್ಯಮಹಾಶಯರು ಸ್ವಲ್ಪ ಸಾವಧಾನವನ್ನೂ ವ್ಯವಧಾನವನ್ನೂ ತೋರಿ ಪ್ರದರ್ಶನಾಗಾರದ ಒಳಗೆಲ್ಲಾ ತಿರುಗಾಡಿ ಪುಸ್ತಕದರ್ಶನ ಪಡೆದು, ತನಗೆ ಇಷ್ಟವಾದ ಓದಬೇಕೆನಿಸಿದ ಒಂದಾದರೂ ಪುಸ್ತಕವನ್ನು ಕೊಂಡು ಮನೆಗೆ ಒಯ್ದು ಬಿಡುವು ಸಿಕ್ಕಾಗ ಓದುವುದಾದರೆ ಅವರು ಮಾಡಿದ ಚಾಲನಾಕಾರ್ಯ ಸಾಂಪ್ರದಾಯಿಕವಾದರೂ ಅರ್ಥಪೂರ್ಣವೆನಿಸುತ್ತದೆ; ಉದ್ಘಾಟನಾ ಸಮಾರಂಭದಲ್ಲಿ ಪುಸ್ತಕಗಳ ಮಹತ್ವವನ್ನು ಕುರಿತು ಆಡಿದ ಮಾತುಗಳಿಗೆ ವಿಶ್ವಾಸಾರ್ಹತೆ ಪ್ರಾಪ್ತಿಯಾಗುತ್ತದೆ. ಹೀಗಾಗಬೇಕಾದರೆ ಕಾರ್ಯಕ್ರಮದ ಆಯೋಜಕರು ಸ್ವಲ್ಪ ಸೂಕ್ಷ್ಮವಾಗಿಯೂ ನಿರ್ಬಿಡೆಯಾಗಿಯೂ ಆಲೋಚಿಸಿ ವಾಚನಾಭಿರುಚಿಯುಳ್ಳ ಗಣ್ಯರನ್ನೇ ಆಹ್ವಾನಿಸಬೇಕಾಗುತ್ತದೆ. ಚಿತ್ರಾಗಾರವನ್ನು ಉದ್ಘಾಟಿಸಲು ಬಂದ ಮಹಾಶಯರು ಪ್ರದರ್ಶನಕ್ಕಿಟ್ಟ ಚಿತ್ರಗಳನ್ನು ನೋಡಿ ಆನಂದಿಸುವ ಪ್ರಶಂಸಿಸುವ ಹೃದಯವಂತಿಕೆಯನ್ನು ರಸಿಕತೆಯನ್ನು ತೋರಿದರೂ ಸಾಕು. ಪ್ರದರ್ಶನಕ್ಕಿಟ್ಟ ಚಿತ್ರಗಳು ವ್ಯಾಪಾರಕ್ಕೂ ಲಭ್ಯವಿರುವುದಾದರೆ ಒಂದು ಚಿತ್ರವನ್ನು ಕೊಂಡೊಯ್ದು ತಮ್ಮ

ಮನೆಯಲ್ಲೊ ಕಚೇರಿಯಲ್ಲೊ ಇಟ್ಟರೆ ಆ ಸ್ಥಳಕ್ಕೆ ಒಂದು ಶೋಭೆ ಬಂದಂತಾಯಿತು; ಪ್ರೇಕ್ಷಕರಿಗೆ ಕೊಂಡುಕೊಳ್ಳಲು ಪ್ರೇರೇಪಿಸಿದಂತೆಯೂ ಆಯಿತು; ಚಿತ್ರಗಳನ್ನು ಬರೆಯುವ ಕಲಾವಿದರನ್ನು, ಪ್ರದರ್ಶನಗಳನ್ನು ಏರ್ಪಡಿಸುವ ಆಯೋಜಕರನ್ನು ಪ್ರೋತ್ಸಾಹಿಸಿದ ಹಾಗೂ ಆಯಿತು. ಸಂದರ್ಭವನ್ನರಿತ ಇಂತ ನಡವಳಿಕೆಗಳು ಮಾತ್ರ ನಾವು ಮಾಡುವ ಕಾರ್ಯಗಳಿಗೆ ಸುಗಮ ಚಾಲನೆಯನ್ನು ನೀಡಬಲ್ಲವು.

ಕ್ರೀಡಾಕೂಟಗಳನ್ನು, ಅದೆಷ್ಟೋ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಲು ಆಹ್ವಾನಿತರಾಗಿ ಬಂದ ಗಣ್ಯರು ತಾವು ಉದ್ಘಾಟಿಸಿದ ಕಾರ್ಯಕ್ರಮಗಳಲ್ಲಿ ಹೀಗೆ ಸಕ್ರಿಯವಾಗಿ ಭಾಗವಹಿಸಲು ಆಗದೆಹೋಗಬಹುದು. ಆದುದರಿಂದಲೇ ಇರಬೇಕು ಪಾರಿವಾಳಗಳನ್ನು ಹಾರಿಬಿಡುವ, ದೀಪ ಹಚ್ಚುವ ಸಾಂಕೇತಿಕ ವಿಧಿಗಳು ರೂಢಿಗೆ ಬಂದಿವೆ. ಕ್ರೀಡೆಗಳಲ್ಲಿ ಭಾಗವಹಿಸುವ ಯುವ ಕ್ರೀಡಾಪಟುಗಳ ಪ್ರೇಕ್ಷಕರ ಮನಸ್ಸು ಮತ್ತು ಕನಸು ಶುದ್ಧವಾಗಿಯೂ ಉಲ್ಲಾಸಭರಿತವಾಗಿಯೂ ಇರಲಿ ಎಂಬ ಆಶಯ ಬಿಳೀ ಪಾರಿವಾಳಗಳನ್ನು ಹಾರಿಬಿಡುವುದರಲ್ಲಿದೆ ಎನಿಸುತ್ತದೆ, ಶಾಂತಿ ಸೌಹಾರ್ದತೆಗಳ ಸಂಕೇತ ಇದು ಎಂಬುದು ಆಡಳಿತಶಾಹಿ ಬಳಕೆಗೆ ತಂದ ವ್ಯಾಖ್ಯಾನವಾಗಿದೆ. ನಿರಂತರವಾಗಿ ಸಂಸ್ಕೃತಿ ದೀಪ ಬೆಳಗುತ್ತಿರಲಿ, ಜ್ಞಾನದ ಬೆಳಕು ಹರಡುತ್ತಿರಲಿ ಎಂಬ ಆಶಯವಿದೆ – ದೀಪ ಹಚ್ಚುವುದರಲ್ಲಿ. ಇತ್ತೀಚೆಗೆ ಗಿಡ ನೆಡುವ ಇಲ್ಲವೇ ನೆಟ್ಟ ಗಿಡಕ್ಕೆ ನೀರೆರೆಯುವ ಪದ್ಧತಿ ಕಾಣಿಸಿಕೊಳ್ಳುತ್ತಿದೆ. ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಇಂತಹ ಚಾಲನೆ ಸಂಗತ. ಆದರೆ ಸಾಂಸ್ಕೃತಿಕ ಹಾಗೂ ಇತರ ಕಾರ್ಯಕ್ರಮಗಳಲ್ಲೂ ಇಂತಹ ಉದ್ಘಾಟನೆ ಸಂಗತವಾಗುವುದು ಹೇಗೆ? ಉತ್ತರ ಕಷ್ಟವೇನಲ್ಲ. ಇದು ಪರಿಸರ ಜಾಗೃತಿಯ ಕಾಲ. ನವು ಬಾಳುವ ಭೂಮಿ ಹಸನಾಗಿರಬೇಕು, ಹಸಿರು ನಾಶವಾಗದೆ ಇರಬೇಕು. ಈ ಅರಿವು ಮೂಡಿಸುವ ಕ್ರಿಯೆಯನ್ನೂ ಸಂಸ್ಕೃತಿಯ ಅನನ್ಯ ಭಾಗವಾಗಿಸಿಕೊಳ್ಳುವ ಮನೋಭಾವ ಇಲ್ಲಿದೆ. ನಮ್ಮ ಸಾಂಪ್ರದಾಯಿಕ ಚಾಲನಾ ಕಾರ್ಯಕ್ರಮಗಳಿಗೆ ಇದೊಂದು ಹೊಸ ಬಗೆಯ ತಿರುವು.

ಜೀವನವಿಡೀ ನೆನಪಿಡುವ ಭೇಟಿ

– ರೈಮ ಗೋಪಿನಾಥನ್ ನಾಯರ್

ಮಕ್ಕಳಾದ ನಮಗೆ ದಿಲ್ಲಿ ದೂರದ ಮತ್ತು ನಾವು ಹೋಗಲಾರದ ಸ್ಥಳವೆಂದು ತೋರುತ್ತಿತ್ತು. ಆ ದೂರದ ಸ್ಥಳಕ್ಕೆ ನಮ್ಮ ತಂದೆ–ತಾಯಿಗಳು ಹೋಗಿದ್ದರೆ ಹೊರತು ನಾವು ಹೋಗಿರಲಿಲ್ಲ. ಅದಕ್ಕಾಗಿ ನಮ್ಮ ತಂದೆ ನಮ್ಮನ್ನು ದಿಲ್ಲಿಗೆ ಕರೆದುಕೊಂಡು ಹೋಗವುದಾಗಿ ಹೇಳಿದಾಗ ನಾವು ರೋಮಾಂಚಿತಗೊಂಡೆವು. ಅದು ಬಹಳ ಕಾಲದ ಹಿಂದೆ. ೧೯೪೭ರ ನವೆಂಬರ್ ಎಂದು ನನಗೆ ಇನ್ನೂ ನೆನಪಿದೆ. ದಿಲಿಯಲ್ಲಿ ನೋಡಬೇಕಾದ ಸಾಮಾನ್ಯವಾದ ಎಲ್ಲವನ್ನೂ ನಾವು ನೋಡಿದೆವು – ಕೆಂಪುಕೋಟೆ, ಕಾನಾಟ್ ಪ್ಲೇಸ್, ಹಳೇ ದಿಲ್ಲಿ, ಬಿರ್ಲಾ ಮಂದಿರ, ಮ್ಯೂಸಿಯಂಗಳು. ಕುತುಬ್‌ಮಿನಾರ್ ಮತ್ತು ರಾಷ್ಟ್ರಪತಿ ಭವನ. ದೂರದಲ್ಲಿ ಕಾವಲುಗಾರನಂತಿದ್ದ ಸರ್ಕಾರದ ಕಾರ್ಯಸೌಧ.

"ನಾಳೆ ನಿಮ್ಮನ್ನು ದಿಲ್ಲಿಯಲ್ಲಿ ಅತ್ಯಂತ ಸುಯೋಗ್ಯ ಸ್ಥಳಕ್ಕೆ ಕರೆದುಕೊಂಡು ಹೋಗುವೆ" ಎಂದು ನಮ್ಮ ತಂದೆ ರಾತ್ರಿ ನಾವು ಮಲಗುವ ಮುಂಚೆ ಹೇಳಿದರು. "ನಾವು ಬಿರ್ಲಾ ಹೌಸಿಗೆ ಹೋಗಿ ಮಹಾತ್ಮಾಗಾಂಧೀಯವರ ಪ್ರಾರ್ಥನಾ ಸಭೆಯಲ್ಲಿ ಕುಳಿತುಕೊಳ್ಳುವೆವು." ಅಲ್ಲಿಗೆ ಹೋಗಲು ನವು ಬಹಳ ಆತುರವಾಗಿದ್ದೆವು. ಮಾರನೆಯ ದಿನ ಸಂಜೆ ಬಿರ್ಲಾ ಹೌಸಿನತ್ತ ನಡೆದೇಬಿಟ್ಟೆವು. ಅದೊಂದು ತಣ್ಣನೆಯ ಸಂಜೆ. ಬಿರ್ಲಾ ಹೌಸಿನ ಆ ಹಸಿರು ಮೈಯ ಹುಲ್ಲುಗಾವಲನ್ನು ನೋಡಿದ್ದು ನೆನಪಿದೆ. ಆ ಹುಲ್ಲುಗಾವಲಿನ ನಡುವೆ ಸಿಮೆಂಟ್ ಕಾಲ್ದಾರಿಯೊಂದಿತ್ತು. ಅದು ಆ ದೊಡ್ಡ ಬಂಗಲೆಯಿಂದ ಪ್ರಾರ್ಥನಾ ಸಭೆಗಳು ನಡೆಯುವ ಸ್ಥಳದವರೆಗೆ ಇತ್ತು. ಎತ್ತರವಿದ್ದ ವೇದಿಕೆಯ ಎದುರಿಗೆ ಜನರ ಗುಂಪೊಂದು ಕುಳಿತಿತ್ತು. "ಬನ್ನಿ, ಆ ಕಾಲುದಾರಿಯ ಪಕ್ಕ ನಿಲ್ಲೋಣ. ಅಲ್ಲಿಂದಲೇ ಗಾಂಧೀ ಹೋಗುತ್ತಾರೆ" ಎಂದು ನಮ್ಮ ತಂದೆ ಅಂದರು. ಅಲ್ಲಿ ನಾನು ನನ್ನ ತಮ್ಮ, ನನ್ನ ತಂದೆ, ಅವರ ಸ್ನೇಹಿತ ಎಲ್ಲ ನಿಂತುಕೊಂಡೆವು. ಹಿಂದಿರುಗಿ ನೋಡಿದಾಗ ಆ ಉದ್ದನೆಯ ಕಾಲ್ದಾರಿಯ ಸ್ಪಷ್ಟ ಚಿತ್ರ ಕಾಣುತ್ತಿತ್ತು.

ಅವರ ಬರುವಿಕೆಗಾಗಿ ಕಾತುರತೆಯಿಂದ ಕಾಯುತ್ತಾ ನಿಂತಿದ್ದೆವು. ಕೊನೆಗೆ ಸರಿಯಾದ ಸಮಯಕ್ಕೆ ಅವರು ಹೊರ ಬರುತ್ತಿರುವುದನ್ನು ನೋಡಿದೆವು–ಗಾಂಧೀಜಿ ಮತ್ತು ಅವರ ಇಬ್ಬರು ಸೋದರಸೊಸೆಯಂದಿರು ಇದ್ದರು. ಎಡ ಬಲದಲ್ಲಿದ್ದ ಅವರ ಹೆಗಲ ಮೇಲೆ ಆಸರೆ ಪಡೆಯಲು ಕೈಗಳನ್ನು ಹಾಕಿಕೊಂಡಿದ್ದರು. ಗಾಮಧೀಜಿ

ಅವರೊಂದಿಗೆ ಮಾತನಾಡುತ್ತಿದ್ದರು, ಮುಗುಳುನಗುತ್ತಿದ್ದರು ಮತ್ತು ನಗುತ್ತಿದ್ದರು. ನಾವು ಗಾಂಧೀಜಿಯತ್ತ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದೆವು. ಆ ನಮ್ಮ ನೋಟ ಅವರನ್ನು ಕಣ್ತುಂಬ ನೋಡುವಂತಿತ್ತು. ಅವರು "ನಿಮ್ಮ ಮುಂದೆ ದಾಟಿ ಹೋಗುತ್ತಿರುವಾಗ ಅವರ ಭುಜವನ್ನು ಮೆತ್ತಗೆ ಭಕ್ತಿಯಿಂದ ಮುಟ್ಟಿ, ನಂತರ ನಿಮ್ಮ ಹಣೆ ಮುಟ್ಟಿ ರಾಮ ರಾಮ ಅನ್ನಿರಿ" ಎಂದು ನಮ್ಮ ತಂದೆ ಸೂಚನೆ ಕೊಟ್ಟಿದ್ದರು.

ಸೂಚನೆಯಂತೆ ಗಾಂಧೀಜಿಯವರ ಭುಜ ಮುಟ್ಟಿದೆವು ನಮ್ಮ ಹಣೆ ಮುಟ್ಟಿದೆವು ಮತ್ತು ರಾಮ ರಾಮ ಅಂದೆವು. ಯಾರೂ ನಮ್ಮನ್ನು ತಡೆಯಲಿಲ್ಲ. ಆದರೆ ಇನ್ನೊಂದು ಸಲ ಆ ರೀತಿ ಕೃತಿ ಮಾಡುವ ಮೊದಲೆ ಗಾಂಧೀಜಿ ತಿರುಗಿದರು ಮತ್ತು ನಮ್ಮತ್ತ ಮುಗುಳ್ನಗೆ ಬೀರುತ್ತ ನೋಡಿದರು. ನಾವು ರೋಮಾಂಚಿತಗೊಂಡು ಮುಂದೆ ಹೋಗಿ ಬೇರೆ ಜನರೊಟ್ಟಿಗೆ ಕುಳಿತುಕೊಂಡೆವು. ನಮಗೆ ಹಿಂದಿ ಅಪರಿಚಿತ ಭಾಷೆಯಾಗಿದ್ದರಿಂದ ಗಾಂಧೀಜಿ ಏನು ಹೇಳುತ್ತಿದ್ದಾರೆ ಅನ್ನುವುದು ಗೊತ್ತಾಗುತ್ತಿರಲಿಲ್ಲ. ಆದರೆ ಅವರ ಧ್ವನಿಯನ್ನು ಕೇಳುವುದೇ ಸಾಕಾಗಿತ್ತು. ಅಲ್ಲಿ ಕುಳಿತ ತೆಳ್ಳಗಿನ ವ್ಯಕ್ತಿ ಇಡೀ ದೇಶವನ್ನು ತನ್ನ ಮುಷ್ಟಿಯಲ್ಲಿ ಇಟ್ಟುಕೊಂಡಿದ್ದಾನೆಂದು ನಂಬುವುದು ಕಷ್ಟವಾಯಿತು.

ಸಭೆ ಮುಗಿಯಿತು. ಗಾಂಧೀಜಿ ಬಿರ್ಲಾ ಹೌಸಿನತ್ತ ಮಾಯವಾದರು. ಆನ ಜಂಗುಳಿ ಸರಿಯಿತು. ನಾವು ನಮ್ಮ ಹೋಟೆಲ್ಲಿಗೆ ಹಿಂದಿರುಗಿದೆವು. ಗಾಂಧೀಜಿಯನ್ನು ಕಣ್ಣಾರೆ ಕಂಡಿದ್ದಕ್ಕಾಗಿ ಮತ್ತು ಮುಟ್ಟಿದ್ದಕ್ಕಾಗಿ ನಾವು ಸಂತಸದಿಂದ ಮೂಕರಾಗಿದ್ದೆವು. ನಾವು ಕೊಚಿನ್‌ಗೆ ಹಿಂದಿರುಗಿದೆವು. ಮನೆಯಲ್ಲಿದ್ದ ಎಲ್ಲರಿಗೂ ಬಿರ್ಲಾ ಹೌಸಿನ ಭೇಟಿಯ ವಿಷಯವನ್ನು ವರ್ಣಿಸಿ ಹೇಳಿದೆವು. ನಮ್ಮ ಪುಟ್ಟ ತಂಗಿ ಬೊಗಸೆ ಕಣ್ಣಿನಿಂದ ಹೇಳಿದ್ದನ್ನು ಕೇಳಿದಳು. ಸ್ವಲ್ಪ ದೊಡ್ಡವಳಾದ ಮೇಲೆ ನಿನ್ನನ್ನೂ ಕರೆದುಕೊಂಡು ಹೋಗುವುದಾಗಿ ತಂದೆ ಭರವಸೆ ಕೊಟ್ಟ ಮೇಲೆಯೇ ಅವಳಿಗೆ ಸಮಾಧಾನವಾಯಿತು.

ಅಯ್ಯೋ! ಆ ಭರವಸೆ ಈಡೇರಲೇಯಿಲ್ಲ. ಏಕೆಂದರೆ ಕೆಲವು ತಿಂಗಳುಗಳ ನಂತರ ಓರ್ವ ಕೊಲೆಗಡುಕನ ಗುಂಡುಗಳು ಶಾಶ್ವತವಾಗಿ ಆ ಎದೆಗಾರನ ಹೃದಯ ಮಿಡಿತವನ್ನು ನಿಲ್ಲಿಸಿತ್ತು. ಆ ಭಯಾನಕ ಸುದ್ದಿ ಕೇಳಿದ ನಂತರ ಹಿಮ ಸದೃಶ ಮೌನ ನಮ್ಮನ್ನು ಆವರಿಸಿತು. ಆ ಹೆಪ್ಪುಗಟ್ಟಿದ ಮೌನ "ನಾನು ಗಾಂಧೀಜಿಯನ್ನು ಇನ್ನೆಂದಿಗೂ ನೋಡಲಾರೆನಲ್ಲ ಎಂಬ ತಂಗಿಯ ಬಿಕ್ಕಿ ಬಿಕ್ಕಿ ಅಳುತ್ತಾ ಹೇಳುತ್ತಿದ್ದ ಮಾತಿನಿಂದ ಮುರಿಯಿತು." ಅವಳನ್ನು ಸಮಾಧಾನ ಪಡಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ.

ಸ್ವಚ್ಛ ಭಾರತ ಆಂದೋಲನಕ್ಕೆ ಮೂಲ ಪ್ರಶ್ನೆಗಳು

– ಶಂಕರ ನಾರಾಯಣನ್

ಆಗಸ್ಟ್ ೧೫, ಜನವರಿ ೨೬ ಮತ್ತು ಅಕ್ಟೋಬರ್ ೨ ನಮ್ಮ ದೇಶದ ರಾಷ್ಟ್ರೀಯ ವಿಶೇಷ ದಿನಗಳು. ಪ್ರತಿಯೊಂದಕ್ಕೂ ತನ್ನದೇ ಆದ ಮಹತಿಯಿದೆ. ಪ್ರಧಾನಿ ನರೇಂದ್ರ ಮೋದಿ ಸ್ವಚ್ಛ ಭಾರತ ಅಭಿಯಾನ ಪ್ರಾರಂಭಿಸುವುದಕ್ಕೆ ಅಕ್ಟೋಬರ್ ೨ನ್ನೇ ಆಯ್ಕೆಮಾಡಿಕೊಂಡಿದ್ದರು. ಅದು ಮಹಾತ್ಮಾ ಗಾಂಧೀಜಿಯವರ ಜನ್ಮವರ್ಷ. ಆ ದಿವಸವು ಒಟ್ಟು ತ್ಯಾಗಗಳ ಮೊತ್ತನ್ನು ನಮಗೆ ಜ್ಞಾಪಿಸುತ್ತದೆ. ಜೊತೆಗೆ ಸ್ವಾತಂತ್ರ್ಯ ಚಳುವಳಿಯ ರಾಜಕೀಯ ಹೋರಾಟದಲ್ಲಿ ಇದ್ದ ನೈತಿಕತೆಯನ್ನು ಕೂಡ ತಿಳಿಸುತ್ತದೆ.

ಗಾಂಧೀಜಿ ಭೌತಿಕ ಸ್ವಚ್ಛತೆಯ ಬಗ್ಗೆ ಮಾತ್ರ ಇದ್ದಾರೆ ಎಂಬ ಅಭಿಪ್ರಾಯವನ್ನು ರೂಪಿಸಲಾಗುತ್ತಿದೆ. ತತ್ಪರಿಣಾಮವಾಗಿ ಗಾಂಧಿಯವರನ್ನು ಸ್ಯಾನಿಟರಿ ಇನ್ಸ್‌ಪೆಕ್ಟರ್ ಹಂತಕ್ಕೆ ತಂದು ನಿಲ್ಲಿಸಲಾಗುತ್ತಿದೆ. ವ್ಯಕ್ತಿಗತ ಸ್ವಚ್ಛತೆಯ ಪ್ರತಿಪಾದನೆ ಕೂಡ ಗಾಂಧಿ ವಾದದ ಅವಿಭಾಜ್ಯ ಅಂಗವಾಗಿತ್ತು. ಅಕ್ಟೋಬರ್ ಎರಡರ ಭವ್ಯತೆ ಮತ್ತು ತರ್ಕಬದ್ಧತೆಯಲ್ಲಿ ಬದಲಾವಣೆ ಮಾಡುವುದೆಂದರೆ ಆ ವಿಷಯಕ್ಕೇ ಅವಮಾನವೆಂದೇ ಹೇಳಬಹುದು.

ಜೆ.ಬಿ.ಕೃಪಲಾನಿ ಒಮ್ಮೆ ಈ ರೀತಿ ಹೇಳಿದರು: "ಗಾಂಧೀಜಿ ದೇಶವನ್ನು ಶೌಚಾಲಯದಿಂದ ಹಿಡಿದು ಆತ್ಮದವರೆಗೆ ಶುದ್ಧೀಕರಿಸಲು ಪ್ರಯತ್ನಿಸಿದರು". ಅವರು ಹಿಂದು ಮತ್ತು ಮುಸ್ಲಿಂಮರನ್ನು ಭಾರತ ಮಾತೆಯ ಎರಡು ಕಣ್ಣುಗಳೆಂದು ತಿಳಿದಿದ್ದರು. ಒಂದು ಕಣ್ಣಿನಲ್ಲಿ ಉಂಟಾದ ತೊಂದರೆ ಇನ್ನೊಂದು ಕಣ್ಣಿಗೂ ಆಗುವಂತೆಯೆ ಹಿಂದುಗಳಿಗಾಗಲಿ ಅಥವಾ ಮುಸ್ಲಿಂಮರಿಗಾಗಲಿ ಯಾರೊಬ್ಬರಿಗೂ ತೊಂದರೆ ಆದರೆ ಇಡೀ ಭಾರತ ಕಷ್ಟ ಅನುಭವಿಸುತ್ತದೆ ಎಂದು ಹೇಳಿದ್ದರು. ಗಾಂಧೀಜಿ ಅಂದರು, "ನನ್ನ ಕನಸಿನ ಭಾರತದಲ್ಲಿ ಭಾರತ ಕೇವಲ ಹಿಂದುಗಳಿಂದಾಗಲೀ ಅಥವಾ ಕೇವಲ ಕ್ರಿಶ್ಚಿಯನ್ನರುಗಳಿಂದಾಗಲೀ ಅಥವಾ ಮುಸಲ್ಮಾನರುಗಳಿಂದಾಗಲೀ ಇರುವುದೆಂದು ನಿರೀಕ್ಷಿಸುವುದಿಲ್ಲ. ಭಾರತ ಒಟ್ಟಾರೆಯಾಗಿ ಸಹನಶೀಲ ರಾಷ್ಟ್ರವಾಗಿರಬೇಕೆಂದು ನಾನು ಬಯಸುತ್ತೇನೆ." ಆದರೆ ಆತ್ಮಶುದ್ಧಿಯ ಈ ವಿಚಾರವನ್ನು ಒಪ್ಪುವವರು ಈಗ ಯಾರೂ ಇಲ್ಲವಾಗಿದೆ.

ಗಾಂಧಿ ನಮ್ಮನ್ನು ಈ ರೀತಿ ಎಚ್ಚರಿಸಿದ್ದಾರೆ. "ಪಶ್ಚಿಮ ದೇಶಗಳಂತೆ ಭಾರತ ಎಂದೂ ಕೈಗಾರಿಕೀಕರಣಗೊಳ್ಳದಿರಲಿ. ಅದನ್ನು ದೇವರು ತಪ್ಪಿಸಲಿ". ಒಂದು

ಚಿಕ್ಕ ದ್ವೀಪ ಇಂದು ಇಡೀ ಪ್ರಪಂಚವನ್ನು ಸರಪಣಿಯಲ್ಲಿ ಬಂಧಿಸಿದೆ. ಒಂದು ವೇಳೆ ಈಗ ನೂರಇಪ್ಪತ್ತೈದು ಕೋಟಿ ಜನಸಂಖ್ಯೆಯ ಭಾರತ ಅಂಥದೇ ಆರ್ಥಿಕ ಶೋಷಣೆಯಲ್ಲಿ ತೊಡಗಿದರೆ, ಇಡೀ ಜಗತ್ತನ್ನೇ ಮಿಡತೆಗಳಂತೆ ಎಲ್ಲವನ್ನೂ ಹಾಳು ಮಾಡುವುದು. ಹವಾಮಾನ ಬದಲಾವಣೆ ಎಂಬುದು ಕೇವಲ ನಮ್ಮ ತಲೆಮಾರಿಗಷ್ಟೇ ಅಲ್ಲ, ಭವಿಷ್ಯಕಷ್ಟೇ ಅಲ್ಲ ಈಗಲೇ ಇಲ್ಲಿಯೇ ಇರುವಂಥ ಸವಾಲಾಗಿದೆ.

ಗಾಂಧೀಜಿಯವರು "ಉತ್ತಮ ಜೀವನದ ಮಟ್ಟಕ್ಕೆ ಮಹತ್ವ ಕೊಟ್ಟಿದ್ದರೇ ಹೊರತು ಉತ್ತಮ ಬದುಕಿನ ರೀತಿಯ ಮೇಲಲ್ಲ". ಸಕಲರಿಗೂ ಸುಯೋಗ್ಯವಾದ ಪೌರ್ವಾತ್ಯ ತತ್ವಜ್ಞಾನಾಧಾರಿತ ಜೀವನಮಟ್ಟವಿರಬೇಕೆಂದು ಅವರು ಖಚಿತವಾಗಿ ನಂಬಿದ್ದರು. ಕೇವಲ ಕೆಲವರಿಗೆ ಮಾತ್ರ ದಕ್ಕುವ ಜೀವನ ಮಟ್ಟದ ನಿರಂತರ ಏರುವಿಕೆಯ ಪಾಶ್ಚಿಮಾತ್ಯರ ದುರಾಸೆಯ ಜೀವನ ರೀತಿಯನ್ನು ಅವರು ದ್ವೇಷಿಸುತ್ತಿದ್ದರು. ಇತ್ತೀಚೆಗೆ ವಿದೇಶೀ ಕಂಪನಿಗಳಿಗೆ "ಭಾರತದಲ್ಲಿ ತಯಾರಿಸಿ" ಎಂಬ ಕೊಟ್ಟ ಮೋದಿ ಕರೆ ಗಾಂಧಿ ತತ್ವಕ್ಕೆ ವಿರೋಧಾತ್ಮಕ ಸಂಗತಿಯಾಗಿದೆ.

ಈಗ ಸ್ವಚ್ಛ ಭಾರತ ಅಭಿಯಾನದ ಬಗ್ಗೆ. ಭಾರತೀಯರು ಸಾಮಾನ್ಯವಾಗಿ ತಮ್ಮ ಮನೆಗಳನ್ನು ಸ್ವಚ್ಛವಾಗಿಡುತ್ತಾರೆ. ಆದರೆ ತಮ್ಮ ಸುತ್ತಲಿನ ಪರಿಸರದಲ್ಲಿ ಕಸ ಹಾಕುತ್ತಾರೆ. ಮೋದಿಯವರ ಇತ್ತೀಚೆಗಿನ ಅಭಿಯಾನವು ಈ ದುರಾಭ್ಯಾಸವನ್ನು ತಪ್ಪಿಸಲು ಸಹಾಯ ಆಗಬಹುದು. ಆದರೆ ಕೆಲ ಮೂಲಭೂತವಾದ ವಿಷಯಗಳನ್ನು ಜಮಖಾನದ ಕೆಳಗೆ ಗುಡಿಸಿಬಿಡಲಾಗುತ್ತಿದೆ. ಗಾಂಧೀಜಿ ಭಾರತೀಯರಿಗೆ ಸ್ವಚ್ಛತೆ ಕಾಪಾಡಲು ಹೇಳಿದರಲ್ಲದೆ ಸಾಧ್ಯವಾದಷ್ಟು ಕಡಿಮೆ ತ್ಯಾಜ್ಯವನ್ನು ಸೃಷ್ಟಿಸಿ ಎಂದೂ ಸೂಚಿಸಿದ್ದರು. ಕಡಿಮೆ ಪದಾರ್ಥಗಳನ್ನು ಉಪಯೋಗಿಸುವುದರ ಮೂಲಕ ತ್ಯಾಜ್ಯ ಕಡಿಮೆ ಮಾಡಬಹುದೆಂದು ಹೇಳಿದ್ದರು. ಸ್ವಚ್ಛ ಭಾರತ ಅಭಿಯಾನ ಕಡಿಮೆ ಬಳಕೆ ಮತ್ತು ಕಡಿಮೆ ತ್ಯಾಜ್ಯ ನಿರ್ಮಾಣ ಮಾಡುವುದರ ಬಗ್ಗೆ ಪೂರ್ಣತಹ ಮೌನವಾಗಿದೆ. ಇದಕ್ಕೆ ಕಾರಣವೇನು ಎಂಬುದನ್ನು ಊಹಿಸುತ್ತೀರ?

ಸ್ವಚ್ಛ ಭಾರತದ ಪರವಾಗಿರುವವರ ಗಮನಕ್ಕಾಗಿ ಕೆಳಗೆ ಕೆಲ ಅಂಶಗಳನ್ನು ಕೊಡಲಾಗಿದೆ :-

೧. ಗುಡಿಸಿದ ನಂತರ ಕಸವನ್ನು ಮತ್ತು ಗಲೀಜನ್ನು ಕಸದ ತೊಟ್ಟಿಗಳಲ್ಲಿ ಹಾಕುವುದು ಮೊದಲ ಹೆಜ್ಜೆ. ಕಾರ್ಪೋರೇಷನ್ಸ್‌ಗಳು ಮತ್ತು ಪೌರಸಭೆಗಳು ಆನಂತರ ಏನು ಮಾಡುತ್ತವೆ?. ಕಸವನ್ನು ವಿಂಗಡಿಸುವುದಿಲ್ಲ. ಸಾವಯವ ಮತ್ತು ಸಾವಯವ ಅಲ್ಲದ ತ್ಯಾಜ್ಯಗಳನ್ನು, ಸ್ಯಾನಿಟರಿ ಟವೆಲ್ಲುಗಳು ಮತ್ತು ವಿಷಯುಕ್ತವಾದ ಆಸ್ಪತ್ರೆ ಅಥವಾ ಕಾರ್ಖಾನೆ ತ್ಯಾಜ್ಯಗಳನ್ನೂ ಸೇರಿದಂತೆ ಹತ್ತಿರವಿರುವ ಹಳ್ಳಿಗಾಡು ಪ್ರದೇಶಕ್ಕೆ ಸಾಗಿಸಿ ರಾಶಿ ಮಾಡುತ್ತಾರೆ ಮತ್ತು ಸುಡುತ್ತಾರೆ. ರಾಜ್ಯ ಸರ್ಕಾರಗಳು ಉದ್ದೇಶ ಪೂರ್ವಕವಾಗಿ ಅದೊಂದು

ಬೆಂಕಿ ಅನಾಹುತ ಎಂದು ಮುಚ್ಚಿ ಹಾಕುತ್ತದೆ. ತ್ಯಾಜ್ಯದ ಸುಡುವಿಕೆಯಿಂದ ಉಂಟಾಗುವ ವಿಷಯುಕ್ತ ಅನಿಲ ಅತ್ಯಂತ ಕಡಿಮೆ ತ್ಯಾಜ್ಯ ಉಂಟುಮಾಡುವ ಜನರ ಉಸಿರಾಟಕ್ಕೆ ಕಾರಣವಾಗುತ್ತದೆ. ಅಂದರೆ ಯಾರು ಆರ್ಥಿಕವಾಗಿ ಉತ್ತಮವಾಗಿದ್ದಾರೊ ಅವರು ಸ್ವಚ್ಛ ಭಾರತದ ಆನಂದವನ್ನು ಅನುಭವಿಸುತ್ತಾರೆ. ಸುಟ್ಟ ಮತ್ತು ಸುಡದೆ ಉಳಿದ ತ್ಯಾಜ್ಯ ಅಲ್ಲೆ ಉಳಿದುಕೊಂಡು ಬಿಡುತ್ತದೆ ಮತ್ತು ಸುತ್ತಲಿನ ಪರಿಸರವನ್ನು ಮತ್ತು ನೀರಿನ ಮೂಲವನ್ನು ಹಾಳುಮಾಡುತ್ತದೆ. ಗುಂಡಿಗಳನ್ನು ತುಂಬಲು ತ್ಯಾಜ್ಯವನ್ನು ಉಪಯೋಗಿಸುವ ಕ್ರಮ ಕೂಡ ವೈಜ್ಞಾನಿಕವಾಗಿರುವುದಿಲ್ಲ. ಈ ರೀತಿ ತಪ್ಪು ರೀತಿಯಲ್ಲಿ ಗುಂಡಿಯನ್ನು ತುಂಬಲಾಗುವ ತ್ಯಾಜ್ಯ ಅಕ್ಕಪಕ್ಕದ ಭೂಮಿ ಮತ್ತು ನೀರಿನ ಮೂಲಗಳನ್ನು ಕ್ರಮೇಣ ಸೇರಿಕೊಳ್ಳುತ್ತದೆ. ಪೌರ ಸಭೆಯ ಕ್ಷೇತ್ರದಲ್ಲಿ ಉಂಟಾಗುವ ಗಟ್ಟಿ ತ್ಯಾಜ್ಯವನ್ನು ಸಮರ್ಪಕವಾಗಿ ನಾಶ ಮತ್ತು ಅಪಾಯರಹಿತವನ್ನಾಗಿ ಮಾಡುತ್ತಿರುವ ಒಂದೇ ಒಂದು ನಗರವನ್ನು ಕೂಡ ಹೆಸರಿಸಲು ಸಾಧ್ಯವಾಗುತ್ತಿಲ್ಲ.

೨. Flush Out ಶೌಚಾಲಯ ಭಾರತಕ್ಕೆ ಸೂಕ್ತವಾಗಿಲ್ಲ. ಏಕೆಂದರೆ ಅದು ನೀರನ್ನು ಅತಿಯಾಗಿ ದುರುಪಯೋಗಗೊಳಿಸುತ್ತದೆ. ಶೌಚಾಲಯಗಳನ್ನು ಮತ್ತು ಅಂತಃ ಕೋಟ್ಯಾಂತರ ಶೌಚಾಲಯಗಳನ್ನು ಸುಸ್ಥಿತಿಯಲ್ಲಿ ಇಡುವುದು ಆರ್ಥಿಕವಾಗಿ ಅಸಮಂಜಸ ಮತ್ತು ಸುಸ್ಥಿರವಲ್ಲದ್ದು ಆಗಿರುತ್ತದೆ.

೩. ಪೌರಸಭೆಯ ಸೆಪ್ಟಿಕ್ ಟ್ಯಾಂಕುಗಳಲ್ಲಿ ಸಂಗ್ರಹವಾಗುವ ಮಾನವ ತ್ಯಾಜ್ಯದ ವಿಲೇವಾರಿ ಹೇಗಾಗುತ್ತದೆ? ಭಾರತದಲ್ಲಿ ಮಾನವ ತ್ಯಾಜ್ಯವನ್ನು ಸೂಕ್ತವಾಗಿ ಉಪಚರಿಸಿ ವಿಲೇವರಿ ಮಾಡುವ ಒಂದೇ ಒಂದು ನಗರವನ್ನು ಗುರುತಿಸಿ ನೋಡೋಣ?; ಹತ್ತಿರವಿರುವ ನೀರಿನ ಸಂಗ್ರಹವೆ ತ್ಯಾಜ್ಯವನ್ನು ಪೇರಿಸುವ ತಾಣವಾಗಿರುತ್ತದೆ!

೪. ರಾಸಾಯನಿಕ ವ್ಯವಸಾಯ ಅಂದರೆ ಹಸಿರು ಕ್ರಾಂತಿಯೆಂಬುದು ನಮ್ಮ ದೇಶದ ಉದ್ದಗಲಕ್ಕೂ ಇರುವ ಭೂಮಿ, ನೀರು ಮತ್ತು ಗಾಳಿಯನ್ನು ವಿಷಯುಕ್ತಮಾಡುವ ದೊಡ್ಡ ಮೂಲವಾಗಿದೆ.

೫. ಯಾವುದೇ ರೀತಿ ಶುದ್ಧೀಕರಣ ಮಾಡದೆ ಇರುವ ವಿಷಕಾರಿ ಕೈಗಾರಿಕಾ ತ್ಯಾಜ್ಯಗಳನ್ನು ಹತ್ತಿರವಿರುವ ನದಿಯಲ್ಲಾಗಲೀ, ನಾಲೆಯಲ್ಲಾಗಲೀ ಬಿಡಲಾಗುತ್ತದೆ. ಅದರಿಂದಾಗಿ ನಮ್ಮ ಎಲ್ಲ ಜಲ ಮೂಲಗಳು ತಮ್ಮ ಜೀವಸತ್ವವನ್ನು ಕಳೆದುಕೊಂಡಿವೆ.

೬. ಮೇಲ್ಕಾಣಿಸಿದ ಎರಡು ದೊಡ್ಡ ಪ್ರಕಾರದ ತ್ಯಾಜ್ಯ ನಿರ್ವಹಿಸಲು ಅತೀ ಪ್ರಚಾರಗೊಳ್ಳುತ್ತಿರುವ ಸ್ವಚ್ಛ ಅಭಿಯಾನ ಯಾವ ಕ್ರಮ ಕೈಗೊಂಡಿದೆ? ತ್ಯಾಜ್ಯ ವಿಲೇವಾರಿ ಆಸ್ಫೋಟನೆಗೊಳ್ಳಬಹುದಾದಂಥ ಪರಿಸ್ಥಿತಿಯನ್ನು ಮುಟ್ಟಿದೆ.

೭. ನಮ್ಮ ಬಳಿ ಸೀಮಿತವಾದ ಸಂಪನ್ಮೂಲಗಳಿವೆ. ಶ್ರೀಮಂತ ರಾಷ್ಟ್ರಗಳನ್ನು ಅನುಕರಣೆ ಮಾಡುವುದರ ಮೂಲಕ ನಾವು ಹೆಚ್ಚು ಹೆಚ್ಚು ಪದಾರ್ಥಗಳನ್ನು ಬಳಸುತ್ತೇವೆ ಅಥವಾ ಉಪಯೋಗಿಸುತ್ತೇವೆ. "ಭಾರತದಲ್ಲಿ ತಯಾರಿಸಿ" ಎಂಬ ಚಳುವಳಿ ಮತ್ತು ಹೆಚ್ಚು ಹೆಚ್ಚು ಪದಾರ್ಥಗಳನ್ನು ಉಪಯೋಗಿಸುವ ಬಗ್ಗೆ ಮಾಧ್ಯಮದ ಪ್ರಚಾರ ಮತ್ತು ಸ್ವಚ್ಛ ಭಾರತ ಒಟ್ಟಿಗೆ ಸಾಗಲಾರವು.

೮. ಕೆಲವು ವಸ್ತುಗಳನ್ನು ತಯಾರಿಸಲು ಬೇಕಾಗಿರುವ ಸ್ವಚ್ಛ ನೀರಿನ ಪ್ರಮಾಣವನ್ನು ಈ ಕೆಳಗೆ ಕೊಡಲಾಗಿದೆ.

ಕಾರು – ಪ್ರತಿಯೊಂದಕ್ಕೆ ಮುಕ್ಕಾಲು ಲಕ್ಷ ಲೀಟರ್; ಸಕ್ಕರೆ – ಪ್ರತಿಯೊಂದು ಕೇಜಿ ಸಕ್ಕರೆಗೆ ೨೦ ಸಾವಿರ ಲೀಟರ್; ಇಂಜಿನಿಯರಿಂಗ್ – ಪ್ರತಿಯೊಂದಕ್ಕೆ ೧೯೬ ಲೀಟರ್; ಕೋಲ – ಪ್ರತಿಯೊಂದಕ್ಕೆ ೭೦ಲೀಟರ್; ಬೀರ್ – ಪ್ರತಿಯೊಂದಕ್ಕೆ ೧೫೫ಲೀಟರ್; ಗಾರ್ಮೆಂಟ್ – ಪ್ರತಿಯೊಂದು ೪೫ಲೀಟರ್/ ಕೇಜಿಗೆ; ಇನ್ನು ಉಷ್ಣಸ್ಥಾವರಗಳ ಬಗ್ಗೆ ಮತ್ತು ಅಣುಶಕ್ತಿ ಸ್ಥಾವರಗಳ ಬಗ್ಗೆ ಮತ್ತು ತೀವ್ರತಮವಾದ ಮೀನು ಸಂಸ್ಕರಣಾ ಕೈಗಾರಿಕೆಯ ಬಗ್ಗೆ ಎಷ್ಟು ಕಡಿಮೆ ಮಾತನಾಡುತ್ತೇವೆಯೊ ಅಷ್ಟು ಒಳ್ಳೆಯದು. ಮೇಲ್ಕಾಣಿಸಿದ ಕೈಗಾರಿಕೆಗಳಲ್ಲಿ ಉಪಯೋಗವಾದ ನಂತರ ಹೊರಗೆ ಬರುವ ಮಲಿನ ನೀರು ಕುಡಿಯುವುದಕ್ಕೆ ಅಯೋಗ್ಯವಾಗಿರುವುದಷ್ಟೇ ಅಲ್ಲ ಭಯಂಕರ ಅಪಾಯಕಾರಿ ವಿಷವಾಗಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಅಂತಃ ನೀರನ್ನು ಕಾರ್ಪರೇಟ್ ಕಂಪನಿಗಳು ಒಂದೇ ಒಂದು ಔಸಿನಷ್ಟು ಅಪರಾಧದ ಮನೋಭಾವವಿಲ್ಲದೆ ನೀರಿನ ಮೂಲಗಳಿಗೆ ಸೇರಿಸುತ್ತವೆ. ಸರ್ಕಾರಿ ಸ್ವಾಮ್ಯದ ಉದ್ಯಮಗಳಿಂದ ಮೊದಲುಗೊಂಡು ಕಾರ್ಪೋರೇಟ್ ಕಂಪನಿಗಳು, ಚಿಕ್ಕ ಪುಟ್ಟ ಕೈಗಾರಿಕೆಗಳು ಕೂಡ ಈ ಬೃಹತ್ ಪ್ರಮಾಣದ ಅಪರಾಧದಲ್ಲಿ ಸ್ಪರ್ಧೆ ಮಾಡುತ್ತಿವೆ. ಈ ಮಹಾಪರಾಧದ ಈ ಸ್ಪರ್ಧೆಗೆ ಸರ್ಕಾರ ಕುಮ್ಮಕ್ಕು ಕೊಡುತ್ತಿದೆ.

೯. ದುರಾಸೆಯ ವಾಣಿಜ್ಯೋದ್ಯಮಿಗಳು ಒಂದಾದ ಮೇಲೆ ಒಂದು ಕಂಟೇನರ್ ತುಂಬಾ ಲಿಸ್ಬನ್, ಲಂಡನ್ ಮುಂತಾದ ಸ್ಥಳಗಳಿಂದ ಕೈಗಾರಿಕಾ ಮತ್ತು ನಗರ ತ್ಯಾಜ್ಯಗಳನ್ನು ತರಿಸಿ ನಮ್ಮ ದೇಶದ ಭೂಮಿಯ ಉದ್ದಗಲಕ್ಕೂ ಹರಡುತ್ತಾರೆ. ಟ್ಯುಟುಕೊರಿನ್ ಬಂದರು ಇದಕ್ಕಾಗಿ ಕುಪ್ರಸಿದ್ಧವಾಗಿದೆ. ಸ್ವಚ್ಛ ಭಾರತ ಅಭಿಯಾನ ಈ ದಿಕ್ಕಿನತ್ತ ನೋಡುವುದೇ?

೧೦. ಅತ್ಯಂತ ಅಪಾಯಕಾರಿ ತ್ಯಾಜ್ಯವೆಂದರೆ ಉರಿದುಹೋಗಿ ಉಳಿದ ಉರುವಲು ಅಥವಾ ಅಣು ಸ್ಥಾವರಗಳಿಂದ ಮತ್ತು ಆಸ್ಪತ್ರೆಗಳಿಂದ ಬರುವ ತ್ಯಾಜ್ಯ. ವಿಕಿರಣದಿಂದ ಮುಕ್ತಗೊಂಡಿರುವ ತ್ಯಾಜ್ಯದ ಅರ್ಧ ಜೀವಾವಧಿಯೇ ಸುಮಾರು ೩೫ ಸಾವಿರ ವರ್ಷ! ಇಂಥ ದೀರ್ಘ ಆಯುಷ್ಯದ ತ್ಯಾಜ್ಯ ನಮ್ಮ ಭವಿಷ್ಯದ

ಅನೇಕ ಸಾವಿರಾರು ತಲೆಮಾರುಗಳನ್ನು ಬಾಧಿಸುತ್ತದೆ. ಮನುಷ್ಯನಿಗೆ ಗೊತ್ತಿರುವಂತಃ ಇಂತಃ ಅತ್ಯಂತ ಅಪಾಯಕಾರಿ ತ್ಯಾಜ್ಯವನ್ನು ಅಪಾಯರಹಿತವನ್ನಾಗಿಯೂ, ಶುದ್ಧೀಕರಿಸುವುದು ಗೊತ್ತಿಲ್ಲದಿರುವಂತಃ ಸ್ವಚ್ಛ ಭಾರತದ ಬಗ್ಗೆ ನೀವೇನು ತಾನೇ ಊಹಿಸಬಲ್ಲಿರಿ?

೧೧. ಭಾರತೀಯ ರೈಲು ದೇಶದ ಭೂಮಿಯನ್ನೆಲ್ಲ ಒಣ ಶೌಚಾಲಯ ಪದ್ಧತಿಗೆ ಕಟ್ಟು ಬಿದ್ದು ಕೆಡಿಸುತ್ತಿದೆ. ೧೯೯೩ರಲ್ಲಿಯೇ ದೈಹಿಕ ಶುದ್ಧೀಕರಣವನ್ನು ನಿಷೇಧಿಸಲಾಗಿದೆ. ೨೦೧೯ರ ವೇಳೆಗೆ ಸ್ವಚ್ಛ ಭಾರತದ ನಿರೀಕ್ಷಣೆಯನ್ನು ಮೋದಿ ಇಟ್ಟುಕೊಂಡಿದ್ದಾರೆ. ರೈಲ್ವೆ ಅಧಿಕಾರಿಗಳು ಎಲ್ಲ ಒಣ ಶೌಚಾಲಯಗಳನ್ನು ೨೦೨೨ರ ವೇಳೆಗೆ ಬದಲಾಯಿಸುವುದಾಗಿ ಹೇಳುತ್ತಿದ್ದಾರೆ. ಇದು ಸರ್ಕಾರದಿಂದ ಆಗುತ್ತಿರುವ ಶಿಕ್ಷಾರ್ಹ ಅಪರಾಧವಲ್ಲವೇ. ಉಮಾಭಾರತಿ, ಸ್ಮೃತಿ ಇರಾನಿ, ಹೇಮಾಮಾಲಿನಿ ಮತ್ತು ಇನ್ನೂ ಅನೇಕ ಶ್ರೀಮಂತ ವರ್ಗದ ಮಹಿಳೆಯರು ಹೆದ್ದಾರಿಯ ಮೇಲೆ ಇಲ್ಲದೇ ಇರುವ ಕಸವನ್ನು ಗುಡಿಸುವ ಚಿತ್ರಗಳನ್ನು ಮಾಧ್ಯಮಗಳು ಪ್ರಕಟಿಸುತ್ತಲೇ ಇರುತ್ತವೆ. ಆ ಶ್ರೀಮಂತ ಮಹಿಳೆಯರು ಎಲ್ಲ ರೈಲ್ವೆ ನಿಲ್ದಾಣಗಳಲ್ಲಿ ಮಾನವ ನಿರ್ಮಿತ ಮಲವನ್ನು ತೆಗೆಯಲು ದಲಿತ ಮಹಿಳೆಯರೊಂದಿಗೆ ಕೈ ಜೋಡಿಸುವರೇ?

೧೨. ಇಂದಿನ ಸರ್ಕಾರದಲ್ಲಿ ಸ್ವಚ್ಛ ಗಂಗಾ ಎಂಬುದು ಆಕರ್ಷಕ ಘೋಷಣೆಯಾಗಿದೆ. ಸಾವಿರಾರು ಊರುಗಳು, ನಗರಗಳು, ಪಂಚಾಯಿತಿಗಳು ಮತ್ತು ಕೈಗಾರಿಕೆಗಳಿಂದ ಹರಿದು ಹೋಗುವ ಚರಂಡಿಯ ನೀರನ್ನು ತಡೆಯದೇ ನೀವು ಗಂಗೆಯನ್ನು ಪರಿಶುದ್ಧಗೊಳಿಸಬಲ್ಲಿರ? ಮಾನವ ನಿರ್ಮಿತ ತ್ಯಾಜ್ಯದೊಂದಿಗೆ "ಭಾರತದಲ್ಲಿ ತಯಾರಿಸಿದ್ದು" ಕಾರ್ಖಾನೆಗಳಿಂದ ಮತ್ತು ಬನಾರಸಿ ರೇಷ್ಮೆ ಕೈಗಾರಿಕೆಯಿಂದ ಬರುವ ತ್ಯಾಜ್ಯದಿಂದ ಇಡೀ ನದಿಯ ಅಸ್ತಿತ್ವಕ್ಕೇ ಧಕ್ಕೆ ಬಂದಿದೆ. ಎಲ್ಲಿಯವರೆಗೆ ಪೊರಕೆ ಹಿಡಿದಿರುವ ಈ ಅಭಿಯಾನಿಗಳು ಈ ಅಪರಾಧವನ್ನು ತಪ್ಪಿಸಬಲ್ಲರು?

ಸ್ವಚ್ಛ ಭಾರತ ಅಭಿಯಾನದ ಈ ಒಂದು ಸಂಭ್ರಮದಲ್ಲಿ ನಾವು ಕೊಚ್ಚೆಯಲ್ಲಿ ಮುಳುಗಿ ಹೋಗುತ್ತೇವೆ ಮತ್ತು ಮೂಲಭೂತ ಸಂಗತಿಗಳನ್ನು ಯುದ್ಧೋಪಾದಿಯಲ್ಲಿ ಎದುರಿಸದಿದ್ದರೆ ಹಾಳಾಗಿ ಹೋಗುವೆವು. ನಾವು ಎರವಲು ಪಡೆದಿರುವ ಸಮಯದಲ್ಲಿ ಜೀವಿಸುತ್ತೆದ್ದೇವೆ.

ಜನತಾ ಸಾಭಾರ ಅನು : ಸುಕೌ

ಕಂಬಿ ಹಿಂದಣ ಜೀವಗಳು

– ನಗರಿ ಬಾಬಯ್ಯ

(ಶ್ರೀ.ನಗರಿ ಬಾಬ ಕರ್ನಾಟಕದ ಒರ್ವ ಹಿರಿಯ ಚಿಂತಕರು. ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟನೆ ಮಾಡುವಂಥ ಎದೆಗಾರರು. ಅವರನ್ನು ಎಡಪಂಥೀಯ ಎಂದು ತಪ್ಪಾಗಿ ಭಾವಿಸಿ ಸರ್ಕಾರ ಅವರನ್ನು ಕಾರಾಗೃಹಕ್ಕೆ ಅಟ್ಟಿತು. ಅಮಾಯಕ ವ್ಯಕ್ತಿಯಾಗಿದ್ದರೂ ಸಹ ಅವರು ಕಾರಾಗೃಹದಲ್ಲಿ ಮೂರು ತಿಂಗಳು ಕೊಳೆಯಬೇಕಾಯಿತು. ಕಾರಾಗೃಹದಲ್ಲಿಯ ತಮ್ಮ ಕಟು ಮತ್ತು ಅಮಾನುಷ ಅನುಭವಗಳನ್ನು "ಕಗ್ಗತ್ತಲ ಜಗತ್ತಲ್ಲಿ ತೊಂಬತ್ತು ದಿನ" ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಆ ಪುಸ್ತಕದ ಒಂದು ಅಧ್ಯಾಯವನ್ನು ಓದುಗರ ಗಮನಕ್ಕಾಗಿ ಪ್ರಸ್ತುತಪಡಿಸಲಾಗಿದೆ – ಸಂ.)

ಎಷ್ಟೊಂದು ಥಿಯರಿಗಳು, ಎಷ್ಟೊಂದು ಫಿಲಾಸಫಿಗಳು, ಒಂದರ ಹಿಂದೊಂದು, ಒಂದರ ಮೇಲೊಂದು ನುಗ್ಗಿ ನುಗ್ಗಿ ಬರುತ್ತಾ ಹೊಗುತ್ತವೆ. ಮನುಷ್ಯನ ಮೂಲಭೂತ ನೋವು ಮಾತ್ರ ಇನ್ನೂ ಹೆಚ್ಚುತ್ತಾ ಹೋಗುತ್ತಿರುತ್ತದೆ. ಆ ಫಿಲಾಸಫಿಗಳೋ, ಮನುಷ್ಯನನ್ನು ಮತ್ತೂ ತುಳಿಯಲೆಂದೇ ಹುಟ್ಟಿಕೊಂಡಂತೆ ಕಾಣುತ್ತದೆ. ಇವೆಲ್ಲಾ ಎಂದಿಗೆ ಬದಲಾಗುತ್ತವೋ, ಹೇಗೆ ಬದಲಾಗುತ್ತವೋ? ಜಗತ್ತಿನ ಜನವೆಲ್ಲ ಖುಷಿಯಲ್ಲಿ ಅರಳುತ್ತ ಸಮಾನತೆಯಲ್ಲಿ ಬದುಕುವ ದಿನ ಬಂದೀತೆ? ಇಲ್ಲ, ಬರುತ್ತೆ, ಎಂದೋ ಒಂದು ದಿನ ಬರುತ್ತೆ, ನಿಜವಾದ ಮನುಷ್ಯ ಅನ್ನುವವನು ಇನ್ನೂ ಹುಟ್ಟಬೇಕಾಗಿದೆ...ಹುಟ್ಟುತ್ತಾನೆ.

ಆ ಜೈಲಿನ ಆಸ್ಪತ್ರೆಯ ಹಾಸಿಗೆಯಲ್ಲೊರಗಿ, ನಡುರಾತ್ರಿ ಕಣ್ಣುಬಿಟ್ಟಾಗ ಒಂಟಿತನದಲ್ಲಿ, ಗವ್ವೆನ್ನುವ ನೀರವದಲ್ಲಿ ಇಂಥ ನೂರಾರು ಯೋಚನೆಗಳು ತಲೆ ತುಂಬ ಕಾಡುತ್ತಿದ್ದವು. ಆ ರಾತ್ರೀಲಿ ಸುತ್ತ ಕಣ್ಣಾಡಿಸುತ್ತಾ ಬಿಳಿಯ ಬೆಡ್‌ಷೀಟ್ ಹೊದ್ದ ಬಂಧಿಗಳನ್ನು ಹೊತ್ತಹಾಸಿಗೆಗಳನ್ನು ಕಂಡರೆ ನನಗೆ ಸುಡುಗಾಡಿನ ನೆನಪು. ಒಂದೇ ಫರಕೆಂದರೆ ಈ ಹಾಸಿಗೆಯೆಂಬ ಸಮಾಧಿಯೊಳಗೆ ಉಸಿರಾಡುವ ಗೊರಕೆ ಹೊಡೆಯುವ ಹೆಣಗಳಿದ್ದವು. ನೋಡಲು ತುಂಬಾ ತಮಾಷೆಯಾಗಿ ಕಾಣುತ್ತಿದ್ದ ದೃಶ್ಯ ! ಇವೆಲ್ಲಾ ನೋಡ ನೋಡುತ್ತಾ ಹೈಸ್ಕೂಲು ದಿನಗಳಲ್ಲಿ ನಾನು ಅನಂತಪುರದ ಸ್ಮಶಾನಕ್ಕೆ ಹೋಗುತ್ತಿದ್ದುದು ನೆನಪಾಯಿತು. ಶರಚ್ಚಂದ್ರ ಚಟರ್ಜಿಯ 'ಶ್ರೀಕಾಂತ್' ಎಂಬ ಕಾದಂಬರಿಯಲ್ಲಿ ನಾಯಕ ಆಗಾಗ ರಾತ್ರಿಯಲ್ಲಿ ರುದ್ರಭೂಮಿಗೆ ಹೋಗುವ ಪ್ರಸಂಗವಿದೆ. ಇದನ್ನು ಓದಿದ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿದ್ದೆ. ಅಂದರೆ, ಆ ಸಮಾಧಿಗಳ ಮೇಲೆ ಮಲಗಿದರೆ ಹೇಗಿರುತ್ತೆ ನೋಡುವಾ ಅಂತ

ಹಣವನ್ನು ಈ ಬಂಧಿಗಳು ಎಲ್ಲೆಲ್ಲಿ ಬಚ್ಚಿಟ್ಟಿರಬಹುದೆಂಬುದನ್ನು ತಿಳಿಯುವುದರಲ್ಲಿ ಅವನು ಮಹಾ ಎಕ್ಸ್‌ಪರ್ಟ್. ಪ್ರತಿದಿನ ಈ ಪೇದೆ ವಿಚಾರಣಾಧೀನ ಬಂಧಿಗಳ ಪ್ಯಾಂಟುಗಳ, ಒಮ್ಮೊಮ್ಮೆ ಷರಟುಗಳ ಜೇಬುಗಳು, ಮೂಲೆ ಮುಡುಕುಗಳನ್ನು ಬಿಡದೆ ತಡಕುತ್ತಿದ್ದ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೆಲವರ ಗುದದ್ವಾರಗಳಿಗೂ ಬೆರಳಿಟ್ಟು 'ಪರಿಶೋಧನೆ' ನಡೆಸುತ್ತಿದ್ದ.(ಈ ತೋಳದ ಕಣ್ಣು ತಪ್ಪಿಸಲು ಕೆಲವರು ನೋಟುಗಳನ್ನು ಅಲ್ಲಿ ತೂರಿಸಿಕೊಳ್ಳುತ್ತಿದ್ದುದೂ ಉಂಟು!) ಈ ಪೇದೆಯು ತನ್ನ ಈ ಅದ್ವಿತೀಯ ಪರಿಶೋಧನೆಯ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಜರುಗಿಸಿದ ನಂತರ ತನ್ನ ಕೈಗಳನ್ನು ತಿಕ್ಕಿ ತಿಕ್ಕಿ ತೊಳೆದುಕೊಳ್ಳುತ್ತಿದ್ದ. ತೊಳೆದುಕೊಳ್ಳುತ್ತಾ ತೊಳೆದುಕೊಳ್ಳುತ್ತಾ "ಇನ್ನೂ ವಾಸನೆ ಹಂಗೇ ಉಳಿದಿರಬಹುದಾ" ಎಂಬ ಗುಮಾನಿಯಿಂದ ಮಧ್ಯೆ ಮಧ್ಯೆ ತನ್ನ ಮೂಗಿನ ಬಳಿಗೆ ಬೆರಳು ತಂದು ಆಘ್ರಾಣಿಸುತ್ತಿದ್ದ ! All The Perfumes Of Arabia Can Not Sweenten This Little Hand ! ಅಯ್ಯೋ ಹಣವೇ ! ಹಣವಲ್ಲವೇ ಇಂಥ ಅಸಹ್ಯಕರ ಶೋಧನೆಯನ್ನು ಈ ಪೇದೆಯ ಕೈಯಿಂದ ಮಾಡಿಸಿದ್ದು ! ಅಂದುಕೊಂಡೆ.

ಇದನ್ನು ನೋಡುವಾಗ ಷೇಕ್ಸ್‌ಪಿಯರ್‌ನ Richard ? ನಾಟಕದ ದೃಶ್ಯವೊಂದು ನೆನಪಾಯಿತು. ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಕರೆದು ಯಾರನ್ನೋ ಕೊಲ್ಲಲು ಆಜ್ಞೆ ಮಾಡುತ್ತಾನೆ. ಆದರೆ ಆ ವ್ಯಕ್ತಿ "ನನಗೂ ಪ್ರಜ್ಞೆ ಇದೆ. ಅಂಥ ಕೆಲಸ ಮಾಡಲಾರೆ" ಅನ್ನುತ್ತಾನೆ. ಇದನ್ನು ಕೇಳಿದ ಆಜ್ಞೆ ಮಾಡಿದ ವ್ಯಕ್ತಿ ಒಂದಿಷ್ಟು ಕಾಸು ತೆಗೆದು ಆ ವ್ಯಕ್ತಿಯ ಜೇಬಿನಲ್ಲಿಟ್ಟು "ಈಗಲಾದರೂ ಕೊಲೆ ಮಾಡಯ್ಯ" ಅನ್ನುತ್ತಾನೆ. ಆ ವ್ಯಕ್ತಿ ತಕ್ಷಣವೇ "ಓಯೆಸ್" ಎಂದು ರೆಡಿಯಾಗುತ್ತಾನೆ. ಇದರಿಂದ ಅಚ್ಚರಿಗೊಂಡ ಆಜ್ಞೆ ಮಾಡಿದವನು "ಎಲ್ಲಿ, ಎಲ್ಲಯ್ಯ ನಿನ್ನ ಪ್ರಜ್ಞೆ?" ಎನ್ನುತ್ತಾನೆ. ವ್ಯಕ್ತಿ ಜೇಬು ಮುಟ್ಟುತ್ತಾ ಹೇಳುತ್ತಾನೆ – "ಇಲ್ಲಿದೆ!" ಇದು ಷೆಕ್ಸ್‌ಪಿಯರ್ ಕೊಡುವ ಹದಿನಾರನೇ ಶತಮಾನದ ಚಿತ್ರ. ಈಗ ಇಪ್ಪತ್ತರ ಅಂಚಿನಲ್ಲಿ ಕೂಡ ಈ ಮೇಲೆ ಹೇಳಿದ ನಮ್ಮ ಪ್ರಚಂಡ ಪರಿಶೋಧಕನಾದ ಪೇದೆಯನ್ನು "ಎಲ್ಲಿದೆಯಯ್ಯ ನಿನ್ನ ಪ್ರಜ್ಞೆ?" ಎಂದು ಕೇಳಿದ್ದೇ ಆದರೆ ಏನೆಂದು ಉತ್ತರ ಕೊಟ್ಟಾನೊ?

ಈ ಜೈಲಿನಲ್ಲಿದ್ದ ಹುಡುಗರಲ್ಲಿ ನನ್ನ ಕಣ್ಣೆದುರು ಆಗಾಗ ಸುಳಿಯುವವನೆಂದರೆ ಷಫಿ ಅಹಮದ್ ಎಂಬ ಹುಡುಗ. ಬಲೇ ಚುರುಕು ಹುಡುಗ ಇಂಗ್ಲೀಷು ಮಾತನಾಡುತ್ತಿದ್ದ. ವಿಚಾರಣೆಯಲ್ಲಿದ್ದ ಬಂಧಿಗಳ ಪಿಟೀಷನ್ನುಗಳಿಗೆ ಡ್ರಾಫ್ಟುಗಳನ್ನು ಹಾಕುತ್ತಿದ್ದವನು ಅವನೇ. ಅಡಿಗೆ ಕೂಡ ಗೊತ್ತಿತ್ತು. ಜೈಲಲ್ಲಿದ್ದವರಿಗೆಲ್ಲ ಒಂದಲ್ಲ ಒಂದು ರೀತಿಯ ಸಹಾಯ ಮಾಡುತ್ತಿದ್ದ. ಈ ಹುಡುಗ ಕರೆಸ್ಪಾಂಡೆನ್ಸ್ ಕೋರ್ಸಿನ ಮೂಲಕವಾದರೂ ಲಾ ಪರೀಕ್ಷೆ ಪಾಸು ಮಾಡಲೇಬೇಕೆಂದು ನನಗನಿಸುತ್ತಿತ್ತು.

ಈ ಷಫಿಯದೊಂದು ವಿಚಿತ್ರ ಕೇಸು. ಅವನಿಗೂ ಅವನ ಅಕ್ಕನ ಮಗಳಿಗೂ

ಮಲಗಲು ಯತ್ನಿಸುತ್ತಿದ್ದೆ. ಆದರೆ ಬೇಟೆ ಹುಡುಕಿ ಬರುವ ತೋಳಗಳು ಊಳಿಡಲಾರಂಭಿಸಿದಾಗ ಎದ್ದು ಓಡಬೇಕಾಗುತ್ತಿತ್ತು. ಹುಡುಗುತನದ ರೊಮಾಂಟಿಕ್ ಐಡಿಯಾ ! ಇಲ್ಲಿ ಈ ಜೈಲಾಸ್ಪತ್ರೆಯಲ್ಲಿ ಸಮಾಧಿಯಂತೆ ಕಂಡುಬಂದ ಹಾಸಿಗೆಗಳು ನನ್ನ ಆ ಹುಡುಗುತನದ ಸಮಾಧಿಯ ಅನುಭವವನ್ನು ತಲೆಗೆ ತರುತ್ತಿದ್ದವು.

ಇಂಥ ಸಮಾಧಿಯಂಥ ಕಲ್ಲಿನ ಜಗುಲಿಗಳ ಮೇಲೆ ಜೈಲಿನಲ್ಲಿ ಕೂಡ ಬಂಧಿಗಳು ಇರುತ್ತಿದ್ದವು. ಈ ಬ್ಲಾಕುಗಳ ಎರಡೂ ತುದಿಗಳು ಬ್ರಿಟಿಷರ ಕಾಲದಲ್ಲಿ ತೆರೆದೇ ಇರುತ್ತಿದ್ದವಂತೆ. ಕುದುರೆಯ ಬೆನ್ನ ಮೇಲೆ ಕೂತಂಥ ಆಳುವ ದೊರೆಗಳು ಆ ಖೈದಿಗಳಿಗೆ ಚಾವಟೀಲಿ ಬಾರಿಸುತ್ತಾ ಸಾಗುತ್ತಿದ್ದರಂತೆ. ಈಗ ಈ ತುದಿಗಳನ್ನು ಮುಚ್ಚಲಾಗಿದೆ. ಈ ಘಟ್ಟದಲ್ಲಿ ನಿಮಗೆ ಜೈಲಿನ ನಕ್ಷೆಯನ್ನು ಕೊಡಬೇಕೆಂದರೆ ಇಲ್ಲಿ ಎ.ಬಿ.ಸಿ.ಡಿ.ಇ – ಹೀಗೆ ಐದು ಬ್ಲಾಕುಗಳು. ಹೆಂಗಸರಿಗೇ ಪ್ರತ್ಯೇಕ ಬ್ಲಾಕು ಹಾಗೂ ಸಿಂಗಲ್ ಸೆಲ್ಲುಗಳ ಬ್ಲಾಕುಗಳು. ಪ್ರತಿ ಬ್ಲಾಕಿನಲ್ಲೂ ಮೂವತ್ತರಿಂದ ನಲವತ್ತು ಖೈದಿಗಳು. ಈ ಬ್ಲಾಕುಗಳಲ್ಲಿದ್ದ ವಿಚಾರಣಾಧೀನ ಬಂಧಿಗಳು ಸುಮಾರು ಒಂದು ಸಾವಿರ.

ಆಗ ಬ್ರಿಟಿಷರ ಕಾಲದಲ್ಲಿ ಅಧಿಕಾರಿಗಳು ಕುದುರೆ ಸವಾರಿ ಮಾಡಿಕೊಂಡು ರೌಂಡ್ಸಿಗೆ ಬರುತ್ತಿದ್ದರು. ಈಗ ಪ್ರತಿ ಸೋಮವಾರ ನಡೆಯುವ ರೌಂಡ್ಸುಗಳೋ ದೊಡ್ಡ ಜೋಕು. ಜೀವಾವಧಿ ಶಿಕ್ಷೆಯ ಒಬ್ಬ ಈ ರೌಂಡ್ಸ್‌ಗಳನ್ನು 'ಪಂಚರಂಗೀ ತಮಾಷಾ' ಅಂತ ಕರೆಯುತ್ತಿದ್ದ. ಉಳಿದ ದಿನಗಳಲ್ಲಿ ಹುಲಿಯಂತೆ ಹರಿಹಾಯ್ದು ತನ್ನ ಕೆಳಗಿನವರ ಮೇಲೆ ಅಬ್ಬರಿಸುತ್ತಿದ್ದ ಜೈಲು ಸೂಪರಿಂಟೆಂಡೆಂಟರು ಸೋಮವಾರ ಮೇಲಿನ ಅಧಿಕಾರಿಗಳು ರೌಂಡ್ಸ್‌ಗೆ ಬರುವ ಹೊತ್ತಲ್ಲಿ ನಡುಗುವ ಕೋಳಿ ಮರಿಯಂತೆ ಅದುರುತ್ತಾ ನಿಲ್ಲುತ್ತಿದ್ದರು. ಗೃಹ ಕಾರ್ಯದರ್ಶಿ ಎಸ್.ಕೆ.ಘೋಷಲ್ ಅವರು ಬಂದಾಗಲಂತೂ ಇದೇ ಸೂಪರಿಂಟೆಂಡೆಂಟರು ಕೈಕಟ್ಟಿ ಜನಗಣಮನ ಹೇಳುವ ಸ್ಕೂಲು ಹುಡುಗನಂತೆ ಆರ್ತರಾಗಿ ನಿಂತುಬಿಟ್ಟಿದ್ದರು. ನನ್ನ ಸೆರೆಮನೆಯ ದಿನಗಳ ನೆನಪಿನಲ್ಲಿ 'ಸೋಮವಾರ' ದಂತೆ ಇನ್ನೂ ಹಸಿರಾಗಿರುವುವೆಂದರೆ ಶುಕ್ರವಾರಗಳು. ಶುಕ್ರವಾರ ಎಂದರೆ ಮಾಂಸ ಕೊಡುವ ದಿನ. ಆ ಹೊತ್ತು ಎಲ್ಲ 'ನಾಯಿ'ಗಳು ಅಡಿಗೆ ಮನೆಯ ಸುತ್ತ ಮೂಸುತ್ತಾ ನಿಂತಿರುತ್ತಿದ್ದವು. ಅಂದಹಾಗೆ ಈ ಕೈದಿಗಳು ಜೈಲಿನ ಪೇದೆಗಳ ಬಗ್ಗೆ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುವಾಗೆಲ್ಲ ಬಲು ಪ್ರೀತಿಯಿಂದ 'ನಾಯಿ'ಗಳೆಂದೇ ಅಂದುಕೊಳ್ಳುತ್ತಿದ್ದರು.

ಈ ಪೇದೆಗಳಲ್ಲೆಲ್ಲ ನನಗೆ ಚೆನ್ನಾಗಿ ನೆನಪಿರುವವ ಎಂದರೆ ನಮ್ಮ ಪ್ರಚಂಡ ಪರಿಶೋಧಕ ಪೇದೆ. ನಾನಿದ್ದ ಬ್ಲಾಕಿನಲ್ಲೂ ಖೈದಿಗಳ ಮೇಲೆ ಕಣ್ಣಿಡುವ, ಆಗಾಗ ಅವರನ್ನು ತಪಾಸಣೆ ಮಾಡುವ ಪೇದೆಯೊಬ್ಬ ಇದ್ದ. ವಿಚಾರಣೆಯಲ್ಲಿದ್ದ ಬಂಧಿಗಳು ಕೋರ್ಟಿಗೆ ಹೋಗಿ ಬಂದ ದಿನವಂತೂ ಇವನು ಬಲು ನಿಗಾ ಮಡಗುತ್ತಿದ್ದ. ಹೀಗೆ ಕೋರ್ಟಿಗೆ ಹೋಗಿ ವಾಪಸು ಬಂದಾಗ ಪರಿಚಿತರು, ನೆಂಟರು ಕೊಟ್ಟ

ಪ್ರೀತಿ ಚಿಗುರಿತ್ತಂತೆ. ಆದರೆ ಅವನು ಹಣವಂತನಲ್ಲವೆಂದೂ ಅಣ್ಣ ಅಡ್ಡಗಾಲು ಹಾಕಿದ್ದ. ಹೀಗೆ ಈ ಎಳೆಯ ಪ್ರೇಮಿಗಳ ಪ್ರೀತಿ ತೂಗುಯ್ಯಾಲೆಯಲ್ಲಿರುವಾಗಲೇ ಈ ಹುಡುಗನೂ ಹುಡುಗಿಯೂ 'ಏಕ್ ದೂಜೆ ಕೆ ಲೆಯೆ' ಸಿನಿಮಾ ನೋಡಲು ಹೋದರು. ಸಿನಿಮಾ ನೋಡಿ ಬಂದ ಈ ಎಳೆಯ ಪ್ರೇಮಿಗಳ ಎದೆಯೊಳಗೆ ಬೆಳ್ಳಿ ತೆರೆಯ ಮೇಲೆ ಪ್ರೀತಿಗಾಗಿ ಪ್ರಾಣವನ್ನೇ ಬಿಟ್ಟ ಕಮಲಹಾಸನ್ – ರತಿ ಅಗ್ನಿಹೋತ್ರಿ ತುಂಬಿಕೊಂಡರು. ನಾವೂ ಒಬ್ಬರನ್ನೊಬ್ಬರು ಕೊಂದುಕೊಂಡು ಬಿಡೋಣ ಅಂತ ಮಾತಾಡಿಕೊಂಡರು. ಈ ನಿರ್ಧಾರದ ಫಲವಾಗಿ ಷಫಿ ಆ ಹುಡುಗಿಯ ಇಬ್ಬರು ಅಣ್ಣಂದಿರನ್ನೂ ಮುಗಿಸಿದ. ಕಡೆಗೆ ತನ್ನ ಕೊರಳನ್ನೇ ಸೀಳಿಕೊಳ್ಳುವ ಸಾಹಸ ವಿಫಲವಾಯಿತು. ಜೀವಾವಧಿ ಶಿಕ್ಷೆಯಾಗಿ ಸರಳ ಹಿಂದಿದ್ದಾನೆ. ಮೊದಲು ಅವನಿಗೆ ನೇಣು ಶಿಕ್ಷೆಯಾಗಿತ್ತು. ಮುಗ್ಧ ಹುಡುಗರು. ಒಂದೇ ಧರ್ಮ. ಆದರೆ ಆಸ್ತಿ ಎನ್ನುವುದು ಈ ಪ್ರೇಮಿಗಳ ನಡುವೆ ರಾಕ್ಷಸನಂತೆ ನಿಂತುಬಿಟ್ಟಿತ್ತು.

ಕತ್ತಲಿಗೂ ಭ್ರಮೆಗೂ ಎಲ್ಲಿಂದೆಲ್ಲಿಯ ಸಂಬಂಧವಿದೆಯೋ! ಕತ್ತಲು ಜಗತ್ತಿನೊಳಗೂ ಭ್ರಾಮಕ ಜಗತ್ತೊಂದು ಸೃಷ್ಟಿಯಾಗುತ್ತಲೇ ಇತ್ತು. ಗಾಂಜಾದ ಮೂಲಕ. ಅಡೆತಡೆಯಿಲ್ಲದೆ ಗಾಂಜಾದ ಸಂಚಾರ ಈ ಕತ್ತಲಿನ ಕೋಟೆಯೊಳಗೆ ಹರಿಯುತ್ತಲೇ ಇತ್ತು. ಇದು ಜೇಲಿನ ಸಿಬ್ಬಂದಿಗೂ ಗೊತ್ತಿಲ್ಲದ ವಿಷಯವೇನಲ್ಲ. ಚಿಕ್ಕ ಚಿಕ್ಕ ಹುಡುಗರು ಕೂಡ ದೊಡ್ಡವರಿಗೆ 'ಏನೇನೋ' ಕೆಲಸಗಳನ್ನು ಮಾಡಿಕೊಟ್ಟು ಗಾಂಜಾ ಇಸಿದುಕೊಂಡು ಭ್ರಮೆಯ ಲೋಕಕ್ಕೆ ನುಸುಳುತ್ತಿದ್ದರು.

ಒಮ್ಮೆ ನನ್ನ ಇತರ ಸಹೋದ್ಯೋಗಿಗಳೊಡನೆ ನನ್ನನ್ನು ನೋಡಲು ಬಂದ ಟಿ.ಜಿ.ವೈದ್ಯನಾಥನ್ ಏನೋ ಮಾತನಾಡುತ್ತಾ "ಎರಡನೇ ಮಹಾಯುದ್ಧ ಕಾಲದಲ್ಲಿ ಜರ್ಮನೀಲಿ ಒಂದು ಸಿಗರೇಟಿಗೆ ಒಂದು ಹುಡುಗಿ ಸಿಗುತ್ತಿದ್ದಳೆ"ಂಬ ಅಂಶವನ್ನು ಯವುದೋ ಪುಸ್ತಕದಿಂದ ಕೋಟ್ ಮಾಡಿದರು. ಸರಳ ಹಿಂದಿದ್ದ ನಾನು "ಈ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ನೀವು ಒಂದು ಬೀಡಿ ಕೊಟ್ಟರೆ ಒಬ್ಬ ಹುಡುಗ ಸಿಗುತ್ತಾನೆ; ಮಹಾಯುದ್ಧದ ತನಕ ಏಕೆ ಹೋಗುತ್ತೀರಿ?" ಅಂದೆ.

ನನ್ನ ಗೆಳೆಯರು ಯಾರಾದರೂ ನನ್ನ ನೋಡಲು ಬಂದಾಗ ನಾನು ಎಷ್ಟೊಂದು ಭಾವುಕನಾಗಿಬಿಡುತ್ತಿದ್ದೆ! ಒಮ್ಮೆ ಗೆಳೆಯ ಡಾ॥ ಶ್ರೀನಾಥ್ (ಪ್ರೊ॥ ಸಿ.ಡಿ.ನರಸಿಂಹಯ್ಯನವರ ಮಗ) ನನ್ನನ್ನು ನೋಡಲು ಬಂದರು. ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಛೇಂಬರಿನಲ್ಲಿ ಅವರು ಕೂತಿದ್ದರು. ಒಳಕ್ಕೆ ಅಡಿಯಿಟ್ಟ ನನ್ನನ್ನು ಶ್ರೀನಾಥ್ ಅಪ್ಪಿಕೊಂಡರು. ಅವರ ಕಣ್ಣು ತುಂಬಿ ಮಂಜಾಗಿದ್ದ ಆ ಗಳಿಗೆ ನಾನು ಎಂದಿಗೂ ಮರೆಯುವಂಥದ್ದಲ್ಲ. ನಾನಾದರೋ ಸರಿಯಾದ ಸ್ನಾನ ಗೀನವಿಲ್ಲದೆ ಕೊಳೆತು ನಾರುತ್ತಿದ್ದೆ. ಆದರೆ ಅಂಥ ಹೃದಯ ಸ್ಪರ್ಶಿ ಕ್ಷಣಗಳಲ್ಲಿ ಅದನ್ನೆಲ್ಲ ಯಾರು ತಾನೆ ನೋಡುತ್ತಾರೆ. ಡಾ॥ ಶ್ರೀನಾಥ್ ಹೇಳಿದರು: "ನನ್ನ ಅಮ್ಮ ಮೊನ್ನೆ ನಡುರಾತ್ರಿ

ನಿಮ್ಮ ಹೆಸರನ್ನು ಕೂಗಿಕೊಳ್ಳುತ್ತಾ ಎದ್ದುಬಿಟ್ಟಿದ್ದರು" ಆಕೆ ಅದೇ ತಮ್ಮ ಎರಡನೇ ಮಗ ಸಂಜಯ ಅವರನ್ನು ಕಳೆದುಕೊಂಡಿದ್ದರು. ಅಂಥ ತಾಯಿಯ ಪ್ರೀತಿ ತುಂಬಿದ ಕರುಳು ನನಗಾಗಿ ಚೀರಿದ್ದು ಕೇಳಿ ನಾನು ಕರಕರಗಿ ಹರಿದು ಹೋದೆ. ಎಳೆವೆಯಲ್ಲೇ ಅವ್ವನ್ನ ಕಳೆದುಕೊಂಡ ನಾನು ಇಂಥ ಅವ್ವಂದಿರ ಪ್ರೀತಿಯ ಕ್ಷಣಗಳಲ್ಲಿ ಮೂಕನಾಗಿಬಿಡುತ್ತೇನೆ...

ಇರಲಿ, ಮತ್ತೆ ನನ್ನ ಸುತ್ತ ಇದ್ದ ಪಾತ್ರಗಳತ್ತ ತಿರುಗಿದರೆ ಈಗ ನನ್ನ ಕಣ್ಣೆದುರು ಸುಳಿಯುತ್ತಿರುವವನು ರವಿ. ಪಾಪ, ಇವನು ಬರೇ ತಮಿಳು ಮಾತಾಡುತ್ತಾನೆಂದು ರೇಗಿದ ಉಗ್ರ ಕನ್ನಡಾಭಿಮಾನಿ ಬಂದಿಯೊಬ್ಬ ಇವನ ಒಂದು ಹಲ್ಲನ್ನೇ ಮುರಿದುಬಿಟ್ಟಿದ್ದ. ಇವನ ಕೇಸ್ ಏನು ಅಂತ ಯಾರಾದರೂ ಕೇಳಿದರೆ ಸುತ್ತ ಇದ್ದವರೆಲ್ಲ ನಗುತ್ತಾ ಹೇಳುತ್ತಿದ್ದರು. 'ಸೂಟ್‌ಕೇಸ್!' ಟ್ರೈನುಗಳಲ್ಲಿ ಸೂಟ್‌ಕೇಸುಗಳನ್ನು ಕದಿಯುತ್ತಿದ್ದ ಈ ಹುಡುಗ ಭದ್ರಾವತಿಯಿಂದ ಬೆಂಗಳೂರಿಗೆ ಕಳ್ಳ ರೈಲ್ವೇ ಪಾಸಿಟ್ಟುಕೊಂಡು ಓಡಾಡುವಾಗ ಸಿಕ್ಕಿಬಿದ್ದ.

ಆಸ್ಪತ್ರೆಯಲ್ಲಿದ್ದ ಡಾಕ್ಟರು ಈ ಹುಡುಗನಿಗೆ ಕೃತಕ ಹಲ್ಲು ಜೋಡಿಸಲು ಪ್ರಯತ್ನಿಸಿದ. ಆದರೆ ಯಾಕೋ ಸದು ಸರಿಹೊಂದಲಿಲ್ಲ. ರವಿ ಎಂಬ ಇ ಹುಡುಗ ಇಡೀ ದಿನ ಗೋಣಿಚೀಲ ಹಿಡಿದು ಮೈಮುರಿದು ಕೆಲಸ ಮಾಡುತ್ತಿದ್ದ. ಕೋರ್ಟಿಗೆ ಹೋಗುವಾಗಲೆಲ್ಲ ಮೊಣಕಾಲೂರಿ ಏಸುವಿಗೆ ಮೊರೆಯಿಕ್ಕುತ್ತಿದ್ದ. ಕೊರಳಲ್ಲಿದ್ದ ಕ್ರಾಸಿಗೆ ಮುತ್ತಿಕ್ಕುತ್ತಿದ್ದ. ಆದರೆ ಕೋರ್ಟಿನಲ್ಲಿ ಏಸುವಿನ ಕೈವಾಡ ಏನೂ ನಡೆಯುವಂತಿರಲಿಲ್ಲ!

ಅವನ ಹತ್ತಿರ ಒಂದೇ ಒಂದು ಜೊತೆ ಒಳ್ಳೆಯ ಬಟ್ಟೆಗಳಿದ್ದವು. ಅವನ್ನು ಸದಾ ನೀಟಾಗಿಟ್ಟು ಯಾರಾದರೂ ಬಂಧಿಯ ಕೋರ್ಟಿಗೆ ಹೋಗುವಾಗ ಅವನ್ನ ಬಾಡಿಗೆಗೆ ಕೊಡುತ್ತಿದ್ದ. ನಾನು ಹುಡುಗನಿಂದ ಒಂಚೂರು ತಮಿಳು ಕಲಿಯುವ ಯತ್ನ ಮಾಡಿದೆ. ಆದರೆ ಹಲ್ಲು ಬಿದ್ದ ಮುದುಕನಂತೆ ಕಾಣುವ ಅವನನ್ನು ನೋಡಿದರೆ, ನಗು ಬರುತ್ತಿತ್ತು. ಅವನ ಸುತ್ತ ಇದ್ದ ದಢಿಯರು ಬೇರೆ ಎಲ್ಲಾ ಹಲ್ಲುಗಳನ್ನು ಮುರೀತೀವಿ ಎಂದು ಹೆದರಿಸುತ್ತಿದ್ದರು. ಹೀಗೆ ಹೆದರಿಸಿದಾಗಲೆಲ್ಲ ಅವನು ಡಾಕ್ಟರ ಬಳಿ ಹೋಗಿ ಗೊಳೋ ಅನ್ನುತ್ತಿದ್ದ. ಡಾಕ್ಟರಿಗೆ ಅವನನ್ನು ಕಂಡರೆ ಒಂಥರಾ ಮರುಕ. ಡಾಕ್ಟರನ ತಮಿಳು ಪ್ರೇಮ ಕೂಡಾ ಈ ಮರುಕಕ್ಕೆ ಕಾರಣವಿರಬೇಕು.

ಈ ರವಿ ಎಂಬ ಹುಡುಗ ಪ್ರತಿ ರಾತ್ರಿ ಒಂದೂವರೆ ದಾಟಿದ ನಂತರ ಒಂದು ವಿಚಿತ್ರ ಕಾಯಕವನ್ನು ಶುರು ಮಾಡುತ್ತಿದ್ದ. ರಾತ್ರಿ ಹನ್ನೆರಡರವರೆಗೂ ಅವನು ನಮ್ಮ ಜಮೇನುದಾರನ ಮನೆಯ ಹೆಣ್ಣಾಳುಗಳಂತೆ ಕೆಲಸ ಮಾಡುತ್ತಲೇ ಇರುತ್ತಿದ್ದ. ಎಲ್ಲ ಮುಗಿದ ಮೇಲೆ ತನ್ನಪಾಡಿಗೆ ತಾನು ಒಬ್ಬನೇ ಕುಳಿತು ತುಂಬಾ ಖುಷಿಯಾಗಿ ಉಣ್ಣುತ್ತಿದ್ದ. ಉಂಡವನೇ ಒರಗಿ ಗೊರಕೆ ಶುರುಮಾಡುತ್ತಿದ್ದ. ಹೀಗೆ ಮಲಗಿದ ಕೆಲವು ನಿಮಿಷಗಳ ನಂತರ ಅವನ ಅದ್ಭುತ ಕೈಚಳಕ ಶುರುವಾಗುತ್ತಿತ್ತು.

ಹಾಗೆ ಮಲಗಿದ್ದವನು ಮೆಲ್ಲಮೆಲ್ಲನೆ ಮೇಲೆದ್ದು ಗೋಡೆಯಮೇಲಿನ ಸೂಟು ಕೇಸುಗಳನ್ನು ತಡಕಲಾರಂಭಿಸುತ್ತಿದ್ದ! ಅವನ ಟ್ರೈನಿನ ಕಸುಬು ಬಿಡಲಾರದಂತೆ ಹಿಡಿದುಕೊಂಡು ಬಿಟ್ಟಿತ್ತೇನೋ! ಎಂಥಾ ಮಜಾ ಕೊಡುವ ದೃಶ್ಯ ಅದು.

ಇದೇ ಹುಡುಗ ನಾನು ಸೆರೆಯಿಂದ ಹೊರಬರುವಾಗ ನನ್ನನ್ನು ಕೇಳುವುದಕ್ಕೂ ತಾಳ್ಮೆಯಿಲ್ಲದೆ ನನ್ನ ಬಟ್ಟೆಗಳನ್ನು ತೆಗೆದುಕೊಂಡ. ಉಳಿದವರಿಗೂ ಒಂದೆರಡು ಕೊಡಬೇಕಾಗಿತ್ತು. ಅಂತ ನನಗನಿಸಿತು. ರವಿ ಪ್ರಾಯಶಃ ಈಗ ಅದನ್ನೆಲ್ಲ ಅವರಿವರಿಗೆ ಬಾಡಿಗೆಗೆ ಕೊಟ್ಟು ಭದ್ರಾವತಿ ಸೇರಲು ಛಾರ್ಜಿಗೆ ಕಾಸು ಮಾಡಿಕೊಳ್ಳುತ್ತಿರಬೇಕು. ಆ ಜೈಲಿನಲ್ಲಿ ದಿನವಿಡೀ ದುಡಿಯುವ ಹುಡುಗ ರವಿ. ಆ ಹುಡುಗನಿಗೆ ತಕ್ಕಂಥ ಕೆಲಸ ಕೊಡುವ ಕೈಗಳಿದ್ದರೆ ಅವನು ಕದಿಯುವ ಕಸುಬಿಗೆ ಇಳಿಯುತ್ತಿದ್ದನೆ? ಇದನ್ನು ಈ 'ವ್ಯವಸ್ಥೆ' ಯನ್ನಾಳುವ ಪ್ರಭುಗಳು ಅರ್ಥಮಾಡಿಕೊಳ್ಳಲಾರರೆ? ಈ ಹುಡುಗನಂತೆ ಇನ್ನೊಬ್ಬ ಹವ್ಯಾಸಿ ಕಳ್ಳನಾದ ಹುಡುಗನಿದ್ದ. ಒಮ್ಮೆ ಮ್ಯಾಜಿಸ್ಟ್ರೇಟರು ಈ ಹುಡುಗನ ಕೇಸನ್ನು ಒಂದು ವರ್ಷಕ್ಕೆ ಮುಂದೂಡಿದಾಗ ಸಿಟ್ಟಿಗೆದ್ದು ಚಪ್ಪಲಿಯನ್ನೇ ತೆಗೆದು ಎಸೆದುಬಿಟ್ಟಿದ್ದನಂತೆ. ಈ ಹುಡುಗರ ಆಳದ ನೋವು ನಿರಾಶೆ ಇವನ್ನೆಲ್ಲ ಯಾರು ಅರ್ಥಮಾಡಿಕೊಳ್ಳುತ್ತಾರೆ?

ನಾನು ಆ ಜೈಲಾಸ್ಪತ್ರೆಯಲ್ಲಿರುವಾಗ ರೈತನೊಬ್ಬನನ್ನು ಅಲ್ಲಿ ಸೇರಿಸಲಾಯಿತು. ಬೇಧಿಯಾಗಿ ಅಲ್ಲಿ ಆತ ಚೇತರಿಸಿಕೊಂಡಿದ್ದ. ಅವನಿಗೆ ಗ್ಲೂಕೋಸು, ಔಷಧಿ ಮುಂತಾಗಿ ಸುಮಾರು ಮುನ್ನೂರು ನಾನ್ನೂರು ರೂಪಾಯಿಗಳನ್ನು ಆಸ್ಪತ್ರೆ ಖರ್ಚು ಮಾಡಿರಬೇಕು. ಆ ರೈತನ ಕೇಸಾದರೋ ಏನಿರಬಹುದು ಅಂದುಕೊಂಡಿದ್ದೀರಿ. ಬಲು ದೊಡ್ಡ ಕೇಸು. ರೈಲ್ವೆಪ್ಲಾಟ್ ಫಾರಮ್ಮಿನ ಮೇಲೆ ಅಡ್ಡಾಡುವಾಗ ಪ್ಲಾಟ್‌ಫಾರ್ಮ್ ಟಿಕೇಟು ಕೊಂಡಿರಲಿಲ್ಲ. ಅವನಿಗೆ ಮೂವತ್ತು ರೂಪಾಯಿ ಫೈನು ಜಡಿಯಲಾಗಿತ್ತು. ಜೇಬಲ್ಲಿ ಕಾಸಿರಲಿಲ್ಲ, ಜೈಲಿಗೆ ಬಂದ. ಅಲ್ಲಿಂದ ಜೈಲಾಸ್ಪತ್ರೆಗೆ. ಸ್ವಾತಂತ್ರ್ಯ ಎನ್ನುವುದು ಈ ದೇಶಕ್ಕೆ ಬಂದು ಮೂವತ್ತೆಂಟು ವರ್ಷಗಳೇ ಉರುಳಿದ್ದಾವೆ. ಈ ಕಾನೂನುಗಳು, ರೂಲ್ಸುಗಳು ಸಾಮಾನ್ಯರಿಗೆ ಒಂದೂ ಅರ್ಥವಾಗುವುದಿಲ್ಲ. ಅಲ್ಲ, ಐವತ್ತು ಪೈಸೆಯ ಪ್ಲಾಟ್‌ಫಾರ್ಮ್ ಟಿಕೇಟಿಗಾಗಿ ಮುಗ್ಧ ಹಳ್ಳಿಗನೊಬ್ಬನನ್ನು ಜೈಲಿಗೆ ಕಳಿಸಿ ಅವನನ್ನು ಇಜಣಾಭಿಚಿಣಜ ಮಾಡಲು ಸಾಧ್ಯವಾ? ಅದೂ ಅಷ್ಟೊಂದು ಹಣ ಸುರಿದು ಕಡೆಗೆ ಬಂದ ಭಾಗ್ಯವಾದರೂ ಏನು?

ಇಂಥ ವಿಚಿತ್ರ ಕಾನೂನುಗಳಿಂದಾಗಿ ಸೆರೆಯೊಳಕ್ಕೆ ಬರುತ್ತಿದ್ದವನ ಜೊತೆಗೆ ಇಲ್ಲಿ ಆಗಾಗ ಬರುತ್ತಿದ್ದವರೆಂದರೆ, ಸಿನಿಮಾದ ಬ್ಲಾಕ್ ಟಿಕೇಟ್ ಮಾರುವ ಹುಡುಗರು. ಇಲ್ಲಿ ಈ ಹುಡುಗರು ಬಲಿತ ಖೈದಿಗಳ ಸಲಿಂಗರತಿಯ ಚಟಕ್ಕೆ ಬಲಿಯಾಗುತ್ತಿದ್ದರು. ಈ ಪುಟ್ಟ ಹುಡುಗರನ್ನು ತಮ್ಮ ತಮ್ಮ ಬ್ಲಾಕುಗಳಿಗೆ ಕರೆಸಿಕೊಳ್ಳಲು ಈ ಕೈದಿಗಳು ಪ್ರಭಾವ ಕೂಡ ಬೀರುತ್ತಿದ್ದರು. ನಾನು ಈ ಹಿಂದೆ ಹೇಳಿದ ದಾಸ್ ಮತ್ತು ಶ್ರೀನಿವಾಸ

ಗಾಂಧಿ ಹೀಗೆ ಒಳಬರುವ ಹೊಸ ಹುಡುಗರ ಮೇಲೆ ಸದಾ ಒಂದು ಕಣ್ಣು ಮಡಗಿರುತ್ತಿದ್ದರು ಮತ್ತು 'ಇನ್‌ಫ್ಲುಯೆನ್ಸ್' ನಿಂದ ತಮ್ಮ ಸೆಲ್ಲುಗಳಿಗೆ 'ಅಲಾಟ್' ಮಾಡಿಸಿಕೊಳ್ಳುತ್ತಿದ್ದರು.

ಸರಿಯಾಗಿ ಕಣ್ಣೇ ಬಿಡದ ಈ ಹುಡುಗರು ಅಲ್ಲಿ ಮೈಮುರಿದು ದಿನವಿಡೀ ಕೆಲಸ ಮಾಡುತ್ತಾರೆ. ಇಲ್ಲಿ ಸೆರೆಯಿಂದ ಹೊರಗೆ ಎಲ್ಲಿ ನೋಡಿದರೂ ಜನ ಬಾಲಕಾರ್ಮಿಕರ ಬಗ್ಗೆ ಭಾಷಣ ಕಟ್ಟುತ್ತಾರೆ, ಜೈಲು ಸುಧಾರಣೆಗಳ ಬಗ್ಗೆ ಕೊರೆಯುತ್ತಾರೆ. ಅಲ್ಲ, ನಾನು ಕೇಳುವುದು ಇಡೀ ಸಮಾಜವೇ ಕೊಳೆತು ನಾರುತ್ತಿರುವಾಗ ಜೈಲುಗಳು ಮಾತ್ರ ಸರ್ವಸಂಪನ್ನವಾಗಿರಬೇಕೆಂದು ಹೇಗೆ ಬಯಸುತ್ತೀರಿ?

ಸೆಂಟ್ರಲ್ ಜೈಲಿನ ಇ ಬ್ಲಾಕಿನಲ್ಲಿ ತುಂಬಾ ಪುಟ್ಟ ಹುಡುಗರಿದ್ದರು. ಜೈಲಿನ ನಿಯಮದ ಪ್ರಕಾರ ಅಲ್ಲೊಂದು ಸ್ಕೂಲಿರಬೇಕು. ನಾನು ಅಲ್ಲಿದ್ದ ಸುಮಾರು ತೊಂಬತ್ತು ದಿನಗಳಲ್ಲಿ ಒಂದು ದಿನ ಕೂಡ ಮೇಷ್ಟರನ್ನಾಗಲೀ, ವಿದ್ಯಾರ್ಥಿಗಳನ್ನಾಗಲೀ ಕಾಣಲಿಲ್ಲ. ಗೃಹ ಕಾರ್ಯದರ್ಶಿ ಘೋಷಲ್ ಬಂದಾಗ ಆ ಜೈಲಿನ ಸಿಬ್ಬಂದಿ ಹುಡುಗರೆಲ್ಲಾ ಓದುತ್ತಾ ಕುಂತಿರುವಂತೆ ಪ್ರದರ್ಶಿಸುತ್ತಾ ನಾಜೂಕಾದ ನಾಟಕವನ್ನೇ ಆಡಿಬಿಟ್ಟರು. ಆದರೆ ಈ ಘೋಷಲ್ ಮಹಾಚುರುಕು ಮನುಷ್ಯ. "ನಿಮ್ಮ ಓದೋ ಪುಸ್ತಕಗಳೆಲ್ಲಿ?" ಅಂತ ಆ ಹುಡುಗರನ್ನು ಕೇಳಿದರು. ಆ ಹುಡುಗರು ತಕ್ಷಣ ಅಲ್ಲಿದ್ದ ಪತ್ರಿಕೆಗಳನ್ನೇ ತೋರಿಸಿಬಿಟ್ಟರು. ಘೋಷಲ್ ದಿಗ್ಭ್ರಮೆಗೊಂಡು ನಿಂತರು.

ಇಂಥಾ ಕಳ್ಳಾಟದ ಸೆರೆಮನೆಗಳನ್ನು ಯಾರು ಸುಧಾರಿಸುತ್ತಾರೆ?

ಕಣ್ಣು ಕೂಡ ಮಬ್ಬಾಗಿರುವ ಮುನಿಯಪ್ಪನೆಂಬ ಮುದುಕ ಸುಮಾರು ೯ ವರ್ಷಗಳಿಂದ ವಿಚಾರಣೆ ಎದುರಿಸುತ್ತಾ ಇಲ್ಲಿದ್ದಾನೆ. ತನ್ನ ಮಗನೇ ಮಾಡಿದ್ದ ಕೊಲೆಯೊಂದರ ಆಪಾದನೆಯನ್ನು ತಾನೇ ಹೊತ್ತುಕೊಂಡು ಬಂದ ತ್ಯಾಗದ ಅಪ್ಪ ಈತ! ಹೆಚ್. ಎ. ಎಲ್. ನ ರಿಟೈರ್ಡ್ ವಾಚ್‌ಮನ್ ಮುದುಕ. ಈ ಮುದುಕನ; ಇಂಥ ಮದುಕರ ಗೋಳು ಎಂದಿಗೆ ಮುಗಿದಾವು? ಘೋಷಲ್ ಅಂಥವರೋ, ವಿ.ಆರ್.ಕೃಷ್ಣಅಯ್ಯರ್ ಅಂಥವರೋ ಜೈಲಿಗೆ ಭೇಟಿ ಕೊಟ್ಟ ಗಳಿಗೆಗಳಲ್ಲಿ ಇಂಥ ಮುದುಕರನ್ನು ಅವರ ಕಣ್ಣಿಗೇ ಕಾಣದಂತೆ ಮಂಗಮಾಯ ಮಾಡಲಾಗುತ್ತದೆ. ಇಂಥ ಕಗ್ಗತ್ತಲ ಕಾರಾಗೃಹಗಳಲ್ಲಿ ಬೆಳಕಾದರೂ ಎಲ್ಲಿಂದ ನುಸುಳಬಹುದು ಹೇಳಿ?

ಜನಪದ ಸೇವಾ ಟ್ರಸ್ಟ್ ಸಮಾಚಾರ

ಡಿಸೆಂಬರ್ ತಿಂಗಳಲ್ಲಿ ಈ ಕೆಳಗೆ ಕಾಣಿಸಿದ ಮಹನೀಯರು ಜನಪದ ಸೇವಾ ಟ್ರಸ್ಟಿಗೆ ಭೇಟಿಕೊಟ್ಟು ತಮ್ಮ ಶುಭಾಷಯ ಕೋರಿದರು.

ಡಾ.ಹೆಚ್.ಎಸ್.ದೊರೆಸ್ವಾಮಿ, ಗೋ.ಮಧುಸೂದನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ.ಅಣ್ಣೇಗೌಡ ಹಾಗೂ ಅವರ ಪರಿವಾರ, ಬೆಂಗಳೂರಿನಿಂದ ಮೀರಾ ಅಯ್ಯರ್ ಹಾಗೂ ಅವರ ಸ್ನೇಹಿತರು.

******

ಟ್ರಸ್ಟಿನಲ್ಲಿ ತಯಾರಾಗುತ್ತಿರುವ ಖಾದಿ ಬಟ್ಟೆಗೆ ಸಾವಯವ ಬಣ್ಣವನ್ನು ಹಾಕುವ ಉದ್ದೇಶದಿಂದ ಈ ವಿಷಯದಲ್ಲಿ ಹೆಚ್ಚಿನ ತರಭೇತಿ ಪಡೆಯಲು ಟ್ರಸ್ಟಿನ ಕಾರ್ಯಕರ್ತರಾದ ಸುರೇಶ್, ಲೋಕೇಶ್ ಮತ್ತು ಸಂತೋಷ್ ಕೌಲಗಿಯವರು ಹೈದರಾಬಾದಿಗೆ ಹೋಗಿ ಬಂದರು.
ದೇಸೀ ಪ್ರಶಸ್ತಿ ಪುರಸ್ಕೃತ ಜಗದಾರವರು ಮಾರ್ಗದರ್ಶನ ಮಾಡಿದರು.

******

ಭಾರತೀಯ ವಿದ್ಯಾ ಭವನದ ಹಿರಿಯ ನಿರ್ದೇಶಕರಾಗಿದ್ದ ಮತ್ತೂರು ಕೃಷ್ಣಮೂರ್ತಿಯವರ ಹೆಸರಿನಲ್ಲಿ ಮೈಸೂರಿನಲ್ಲಿ ಸ್ಥಾಪಿತವಾಗಿರುವ ವನಮಾಲಿ ಟ್ರಸ್ಟ್‌ನವರು ಸುರೇಂದ್ರ ಕೌಲಗಿ, ಮತ್ತು ಇತಿಹಾಸಜ್ಞ ಷ.ಶೆಟ್ಟರ್‌ರವರಿಗೆ ಸನ್ಮಾನ ಮಾಡಿದರು.

******

ದತ್ತು ಕೇಂದ್ರದ ಅಕ್ಷತಾ ಎಂಬ ಸುಮಾರು ೮ತಿಂಗಳ ಮಗುವನ್ನು ದತ್ತು ಪೂರ್ವ ಪೋಷಣೆಗೆ ಶ್ರೀ.ಓಬುಳಾಪತಿ ದಂಪತಿಗಳು, ಬೆಂಗಳೂರು ಇವರಿಗೆ ಒಪ್ಪಿಸಲಾಯಿತು.

ಜನಪದ ನಿಲಯದ ಅಂತರಂಗದಲ್ಲಿ – ೧೨೯



೧೯೪೨ರ ಆಗಸ್ಟ್ ಮಾಹೆ. ದೇಶಾದ್ಯಂತ 'ಬ್ರಿಟೀಷರೆ ಭಾರತ ಬಿಟ್ಟು ತೊಲಗಿ' ಎಂಬ ಚಳುವಳಿ ಬಿರುಸಾಗಿ ನಡೆದಿದ್ದ ಕಾಲ. ಎಲ್ಲೆಲ್ಲಿಯೂ ಪ್ರಭಾತ್ ಫೇರಿಗಳು, ಮೆರವಣಿಗೆಗಳು, ಕಲ್ಲುತೂರಾಟ, ಕಛೇರಿಗಳ ದಹನ, ಲಾಠಿ ಪ್ರಹಾರ, ಗೋಲಿ ಬಾರ್ ಇತ್ಯಾದಿಗಳನ್ನು ನೋಡುತ್ತಾ ದೊಡ್ಡವನಾಗುತ್ತಾ ಆಗಾಗ್ಗೆ ಕೈನಲ್ಲಿ ತ್ರಿವರ್ಣಧ್ವಜವನ್ನು ಹಿಡಿದುಕೊಂಡು ಬೆಳಗಾವಿಯ ರಸ್ತೆಗಳಲ್ಲಿ ಮಹಾತ್ಮಾ ಗಾಂಧೀಕಿ ಜೈ, ಜವಹರಲಾಲ್ ನೆಹರೂ ಕಿ ಜೈ, ಕಸ್ತೂರ ಬಾ ಗಾಂಧೀಕಿ ಜೈ, ಜೈ ಹಿಂದ್ ಎಂದು ಗಂಟಲು ಹರಿದು ಹೋಗುವಷ್ಟು ದೊಡ್ಡ ಧ್ವನಿಯಲ್ಲಿ ಕೂಗುತ್ತಾ ಹೋಗುವಾಗ ೭೨ ವರ್ಷಗಳ ಅನಂತರ ರಾಷ್ಟ್ರಪಿತ ಗಾಂಧಿಯವರ ತುಂಬಾ ನಿಕಟ ಶಿಷ್ಯ ಜಮ್ನಾಲಾಲ್ ಬಜಾಜ್‌ರವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಪ್ರಶಸ್ತಿಯಿಂದ ಸ್ವಾತಂತ್ರ್ಯ ಚಳುವಳಿಯ ಕೇಂದ್ರ ಸ್ಥಳವಾಗಿದ್ದ ಮುಂಬೈ ಮಹಾನಗರದಲ್ಲಿ ಸನ್ಮಾನಿಸಲ್ಪಡುವೆನೆಂಬ ವಿಚಾರವಾಗಲೀ, ಕಲ್ಪನೆಯಾಗಲೀ ಇರಲಿಲ್ಲ. ಯಾವ ಸುಳಿವೂ ಇಲ್ಲದ ಅಂಥ ರಾಷ್ಟ್ರಿಯ ಪ್ರಶಸ್ತಿಯೊಂದು ೮೦ನೇ ವರ್ಷದ ಜೀವನದ ಸಂಧ್ಯಾ ಕಾಲದಲ್ಲಿ ಕಳೆದ ೨೮ ನವೆಂಬರ್ ಅಂದು ಸನ್ಮಾನಿಸಲ್ಪಟ್ಟದ್ದು ಜೀವನದಲ್ಲಿಯ ಅಪೂರ್ವವಾದ ಸಂಗತಿಯೇ ಸರಿ. ಜನದಪ ನಿಲಯದಲ್ಲಿಯ ಎಲ್ಲ ಬೆಳವಣಿಗೆಗಳಿಗೆ ಮತ್ತು ಆಗು ಹೋಗುಗಳಿಗೆ ಕಳಶವಿಟ್ಟಂತೆ ಈ ಪ್ರಶಸ್ತಿ ಬಂದಿದೆ. ಈ ಪ್ರಶಸ್ತಿ ಬರಲು ಕಣ್ಣಿಗೆ ಕಾಣದ ಆದರೆ ನನ್ನ ಅನುಭವಕ್ಕೆ ಮಾತ್ರ ಬಂದಿರುವ ನೂರಾರು ಕೈಗಳ ಜೋಡನೆ ಇದೆ. ಸಂದ ಪ್ರಶಸ್ತಿ ಕೇವಲ ಓರ್ವ ವ್ಯಕ್ತಿಗೆ ಸಂದಾಯವಾದುದಲ್ಲ. ಈ ಪ್ರಶಸ್ತಿ ಬರಲು ನೆರವಾದ ಮತ್ತು ಸಹಕರಿಸಿದ ಎಲ್ಲ ರೀತಿಯ ಚಿಕ್ಕ ಮತ್ತು ದೊಡ್ಡ ವ್ಯಕ್ತಿಗಳು ಕಾರಣರಾಗಿದ್ದಾರೆ. ಮೇಲುಕೋಟೆಯಲ್ಲಿ ಜನಪದ ಸೇವಾ ಟ್ರಸ್ಟಿನ ಸ್ಥಾಪನೆಯಾದಾಗಿನಿಂದ ಅದರ ೬೦ವರ್ಷಗಳಷ್ಟು ದೀರ್ಘಕಾಲದ ಕ್ರಿಯಾಶೀಲತೆಯಲ್ಲಿ ಗ್ರಾಮದ ಜನತೆ ಎಂದೂ ತೊಡಕನ್ನು ಉಂಟು ಮಾಡದೆ ನಿರ್ವಿಕಾರ ಭಾವನೆಯಿಂದ ಪ್ರೋತ್ಸಾಹಿಸುತ್ತಾ ಬಂದಿದೆ. ಆ ಕಾರಣದಿಂದಾಗಿಯೇ ಟ್ರಸ್ಟ್ ದೇಶ ಮತ್ತು ವಿದೇಶಗಳಲ್ಲಿ ತನ್ನ ಪ್ರಭಾವವಲಯವನ್ನು ಉಂಟು ಮಾಡಲು ಸಾಧ್ಯವಾಯಿತು. ತನ್ನ ಮೂಲೋದ್ದೇಶದ ಕಾರ್ಯಗಳಿಗೆ ಸರ್ಕಾರದ ಸಹಾಯಕ್ಕಿಂತ ಜನತಾ ಸಹಾಯವನ್ನೇ ಅವಲಂಬಿಸಿಕೊಂಡು ಬರಲು ಸಾಧ್ಯವಾದುದಕ್ಕೆ ಕಾರಣ ಗ್ರಾಮದ, ತಾಲ್ಲೂಕಿನ,

ಜಿಲ್ಲೆಯ ಮತ್ತು ರಾಜ್ಯದ ಜನತೆ ತೋರಿಸಿದ ಹಾಗೂ ವ್ಯಕ್ತಪಡಿಸಿದ ಅಂತಃಕರಣಪೂರ್ವಕವಾದ ಸದ್ಭಾವನೆ. ಮೇಲುಕೋಟೆಯಲ್ಲಿ ಬಂದು ನೆಲೆಸಿದಾಗ ಆಶ್ರಯ ಕೊಟ್ಟದ್ದು ದಿವ್ಯ ದೇಶ ಜೀರ್ಣೋದ್ಧಾರಕ ಭಕ್ತ ಮಂಡಲಿ ಮತ್ತು ಅದರ ಅಧ್ಯಕ್ಷರಾಗಿದ್ದ ಬಿ.ವಿ.ರಾಘವಾಚಾರ್ಯರವರು. ಒಂದು ಬಿಡಿಗಾಸಿನ ಸಂಪಾದನೆಯೂ ಇಲ್ಲದಿದ್ದ ನನಗೆ ಮತ್ತು ಯಾವ ಬಂಧು ಮಿತ್ರರೂ ಇಲ್ಲದ ಸ್ಥಳದಲ್ಲಿ ನೆಲೆ ನಿಲ್ಲುವಂತಾಗಿ ಮತ್ತು ಜನಪದ ಸೇವಾ ಟ್ರಸ್ಟ್‌ನಂಥ ಗಾಂಧಿ ವಿಚಾರ ಪ್ರಣೀತ ಸಂಸ್ಥೆಯೊಂದನ್ನು ಕಟ್ಟಲು ಸಾಧ್ಯವಾದುದಕ್ಕೆ ಭಕ್ತ ಮಂಡಲಿ ಕೊಟ್ಟ ಆಶ್ರಯವೇ ಕಾರಣ. ಅದಕ್ಕಾಗಿ ಬಜಾಜ್ ಪ್ರಶಸ್ತಿ ಬಂದಿರುವ ಸಂದರ್ಭದಲ್ಲಿ ಭಕ್ತ ಮಂಡಲಿಯನ್ನು ಮತ್ತು ರಾಘವಾಚಾರ್ಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ. ಅದೇ ಸಮಯದಲ್ಲಿ ನನ್ನ ಕೆಲಸಕ್ಕೆ ಸಮರ್ಥನೆಯನ್ನು ಕೊಟ್ಟ ಆಗ ಊರ ಮುಖಂಡರಾಗಿದ್ದ ಕಂಟ್ರ್ಯಾಕ್ಟ್ ರಾಮಸ್ವಾಮಿ ಅಯ್ಯಂಗಾರ್, ಪು.ತಿ.ಕೃಷ್ಣಯ್ಯಂಗಾರ್, ಕರಡಿ ರಂಗಸ್ವಾಮಿ ಶೆಟ್ಟಿ, ಎಮ್.ಮಲಶೆಟ್ಟಿ, ಟಿ.ಎಲ್. ಭೈರಶೆಟ್ಟಿ, ಜೋಗಿ ಗೌಡರು, ಪು.ತಿ.ನರಸಿಂಹಾಚಾರ್ಯರು, ಆನಂತ ನಾರಾಯಣ ಆಯ್ಯಂಗಾರ್, ಜಗ್ಗು ನಾರಾಯಣ್ ಇನ್ನು ಹಲವು ವ್ಯಕ್ತಿಗಳಿಗೆ ಮತ್ತು ನೇಕಾರ ಬಾಂಧವರಿಗೂ ಮತ್ತು ಉಳಿದ ಮಿತ್ರರಿಗೂ ಕೂಡ ನಾನು ಆಭಾರಿಯಾಗಿದ್ದೇನೆ. ಸಂಸ್ಥೆಯ ಕಾರ್ಯಕಲಾಪಗಳು ಬೆಳೆಯುವುದಕ್ಕೆ ಕಾರಣವಾದ ಕನ್ನಡದ ಜನಪ್ರಿಯ "ಸುಧಾ ವಾರಪತ್ರಿಕೆ" ಗೆ, ಆಕ್ಸ್‌ಫರ್ಡ್ ಸಂಸ್ಥೆ ಗೆ, ಜರ್ಮನಿಯ ಆರ್ಥರ್ ಟಾರ್‌ನೌಸ್‌ಕಿಗೆ, ಹ್ಯೂಗೋ ಡಿಕ್ಸನ್‌ರವರಿಗೂ, ಜಪಾನ್ ದೇಶದ ಸ್ವಯಂ ಸೇವಕ ಸೇವಕಿಯರಿಗೆ, ಸರ್ವಿಸ್ ಸಿವಿಲ್ ಇಂಟರ್‌ನ್ಯಾಷನಲ್ ಸಂಸ್ಥೆಗೆ, ಸ್ಕೂಲ್ ಫಾರ್ ಪಾರ್ಟ್ನರ್‌ಷಿಪ್ ವರ್ಲ್ಡ್‌ವೈಡ್ ವಿದ್ಯಾರ್ಥಿಗಳಿಗೆ, ಹೆಲ್ಪ್ ಸಂಸ್ಥೆಯ ಸ್ವಯಂ ಸೇವಕರಿಗೆ ಇತ್ಯಾದಿ ಸಂಘ ಸಂಸ್ಥೆಗಳಿಗೂ ನಾನು ಆಭಾರಿಯಾಗಿದ್ದೇನೆ. ಜನಪದ ಸೇವಾ ಟ್ರಸ್ಟ್ ಕಟ್ಟಲು ನೆರವಾದ ಮೈಸೂರಿನ ಪ್ರೋ.ಬಿ.ಆರ್.ಪ್ರಾಣೇಶ್‌ರಾವ್‌ರವರಿಗೆ ಮತ್ತು ಮುಂದೆ ಧರ್ಮದರ್ಶಿಗಳಾಗಿ ಬಂದ ಟ್ರಸ್ಟ್ ಮುನ್ನಡೆಸಲು ಸಹಾಯ ಮಾಡಿದ ಎಲ್ಲ ಧರ್ಮದರ್ಶಿಗಳಿಗೆ ಕೃತಜ್ಞನಾಗಿದ್ದೇನೆ. ಪ್ರಶಸ್ತಿಯ ಶ್ರೇಯಸ್ಸು ಅವರಿಗೂ ಕೂಡ ಸಲ್ಲುತ್ತದೆ. ಯಾವುದೇ ಒಬ್ಬ ವ್ಯಕ್ತಿಯ ಪತನಕ್ಕಾಗಲೀ, ಯಶಸ್ಸಿಗಾಗಲೀ ಆಯಾ ವ್ಯಕ್ತಿಯ ಗುಣ ಸ್ವಭಾವಗಳು ಮತ್ತು ಆಚಾರ ವಿಚಾರಗಳು, ವ್ಯವಹಾರಗಳು ಕಾರಣವಾಗುತ್ತವೆಯಾದರೂ ವ್ಯಕ್ತಿಯ ಯಶಸ್ಸಿಗೆ ಮೂಲ ದ್ರವ್ಯ ಸಮಾಜ ಕೊಡುವ ಸಹಾಯ ಮತ್ತು ಸಹಕಾರ ಕಾರಣ. ಆದ್ದರಿಂದ ಯಾವಾಗಲೂ ವ್ಯಕ್ತಿಗಿಂತ ಸಮಾಜವೇ ದೊಡ್ಡದು. ಆ ವಿರಾಟ್ ಸಮಾಜ ಪುರುಷನಿಗೆ ಅನಂತ ಕೃತಜ್ಞತೆಗಳು.

ಸನ್ಮಾನಿತನಾಗುತ್ತಿರುವುದಕ್ಕೆ ಕಾರಣ ನನ್ನ ಎಲ್ಲ ಕಾರ್ಯಗಳಲ್ಲಿ ಸಹವರ್ತಿನಿಯಾಗಿ, ಸಹ ಚಿಂತಕರಾಗಿ ಕಳೆದ ೫ಳ ವರ್ಷಗಳಿಂದ ಕೈ ಜೋಡಿಸಿದ ಅರ್ಧಾಂಗಿನಿ ಗಿರಿಜಾರವರಿಗೂ ನನ್ನ ಕೃತಜ್ಞತೆಗಳು.

ಖಾದಿ ವಿಚಾರ



ಕೈ ಮಗ್ಗ ಮತ್ತು ಖಾದಿ ಒಂದೇ ನಾಣ್ಯದ ಎರಡು ಮುಖಗಳು. ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಅಹಿಂಸಾ ಶಸ್ತ್ರಗಳು. ಮಹಾತ್ಮಾ ಗಾಂಧಿ ದೇಶದ ನಿರ್ಬಲರಿಗೆ, ನಿಸ್ಸಹಾಯಕರಿಗೆ ಆತ್ಮಾಭಿಮಾನವನ್ನು ತುಂಬಲು ಕೊಟ್ಟ ಉಡುಗೊರೆಗಳು. ದೀರ್ಘ ಸಾಂಸ್ಕೃತಿಕ ಇತಿಹಾಸವಿರುವ ಈ ಎರಡು ಗ್ರಾಮೀಣ ಮತ್ತು ಪರಂಪರಾಗತ ಉದ್ಯೋಗಗಳು ಸ್ವತಂತ್ರ ಭಾರತದ ಕೈಗಾರಿಕಾ ನೀತಿಯಿಂದಾಗಿ ಈ ಉದ್ಯೋಗಗಳು ಅಳಿವಿನಂಚಿನಲ್ಲಿವೆ. ಈ ಉದ್ಯೋಗಗಳಲ್ಲಿ ತೊಡಗಿರುವ ಕುಶಲಕರ್ಮಿಗಳ ಜೀವನ ದುಸ್ಥರವಾಗಿದೆ. ಈ ಉದ್ಯೋಗಗಳನ್ನು ಉಳಿಸಬೇಕೆನ್ನುವ ಹಾಗೂ ಅವುಗಳನ್ನು ವಿಸ್ತರಿಸಬೇಕೆನ್ನುವ ಮಹದಾಸೆಯಿಂದ ರಂಗಕರ್ಮಿ ಮತ್ತು ದೇಶೀ ಸಂಸ್ಥೆಯ ಸ್ಥಾಪಕ ಹೆಗ್ಗೋಡಿನ ಪ್ರಸನ್ನರವರ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ಅವರು ಉಪವಾಸ ಮಾಡಿದ್ದಾರೆ. ಪಾದಯಾತ್ರೆ ಮಾಡಿದ್ದಾರೆ. ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಿದ್ದಾರೆ. ನೇಕಾರರನ್ನು, ಬುದ್ಧಿಜೀವಿಗಳನ್ನು ತಮ್ಮ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಾರೆ. ಈಗ ಈ ಹೋರಾಟದ ಹೊಸ ಆಯಾಮವಾಗಿ ಆನ್‌ಲೈನ್ ಅಭಿಯಾನ ಪ್ರಾರಂಭಿಸಿದ್ದಾರೆ. ಈ ಅಭಿಯಾನವನ್ನು ಖ್ಯಾತ ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನಗಲ್ ಚಾಲನೆ ನೀಡಿದರು. ಖಾದಿ ಮತ್ತು ಕೈಮಗ್ಗ ಉಳಿಸುವಂತೆ ಪ್ರಧಾನಮಂತ್ರಿಯನ್ನು ಕೋರುವ ಉದ್ದೇಶ ಈ ಅಭಿಯಾನದ್ದಾಗಿದೆ. ಒಂದು ದಶಲಕ್ಷ ಆನ್‌ಲೈನ್ ಸಹಿ ಮಾಡಿಸುವ ಉದ್ದೇಶವಿದೆ. ಅರ್ಜಿಯಲ್ಲಿ "ಪ್ರಧಾನಮಂತ್ರಿಗಳೇ ನೀವು ಧರಿಸುವ ಖಾದಿ ಶುದ್ಧ ಖಾದಿಯೆ" ಎಂಬ ಪ್ರಶ್ನೆಯನ್ನು ಕೇಳಲಾಗಿದೆ. ಮತ್ತು ನಕಲಿ ಖಾದಿ ನಿಯಂತ್ರಿಸಲು ಈಗಿರುವ ಖಾದಿ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಲಾಗಿದೆ. ಕರ್ನಾಟಕ ಸರ್ಕಾರ ನೇಕಾರರ ಆಂದೋಲನಕ್ಕೆ ಜವಾಬ್ದಾರಿಯುತವಾಗಿ ಸ್ಪಂದಿಸುತ್ತಿಲ್ಲ. ವಿದ್ಯುತ್ ಮಗ್ಗಗಳ ಮಾಲೀಕರ ಏಜೆಂಟನಂತೆ ವರ್ತಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಎರಡು ಉದ್ಯೋಗಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುತ್ತದೆಂದು ಆಶಿಸಲಾಗಿದೆ.

ಖಾದಿ ಬಗ್ಗೆ ಇತ್ತೀಚೆಗೆ ಅನೇಕ ಯುವಕರು ಆಕರ್ಷಿತರಾಗಿ ಕೆಲಸ ಮಾಡುತ್ತಿದ್ದಾರೆ. ಆಧುನಿಕ ಕೈಗಾರಿಕೆಗಳಲ್ಲಿ ತೊಡಗಿರುವ ಅನೇಕ ಯುವಕರು ಸಹ ಖಾದಿ ಉದ್ದಿಮೆ ಉಳಿಯಲು ಸಹಾಯ ಮಾಡುತ್ತಿದ್ದಾರೆ. ಇತ್ತೀಚೆಗೆ ದೇಸಿ ಪ್ರಶಸ್ತಿ ಪಡೆದ ಎಮ್.ವಿ.ಚಂದ್ರಶೇಖರ್ ಮತ್ತು ಯು.ರವಿಕಿರಣ್ ಇದಕ್ಕೆ ಉದಾಹರಣೆಯಾಗಿದ್ದಾರೆ.

ಸರ್ವೋದಯ ಆಂದೋಲನದ ಮುನ್ನಡೆ

ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಸರ್ವಸೇವಾ ಸಂಘ ಅಂದರೆ ಅಖಿಲ ಭಾರತ ಸರ್ವೋದಯ ಮಂಡಲಿಯ ಕಾರ್ಯಸಮಿತಿಯ ಕಳೆದ ಸಭೆ ಉತ್ತರಾಖಂಡ್ ರಾಜ್ಯದ ಅಲ್ಮೋಡ ಜಿಲ್ಲೆಯಲ್ಲಿರುವ ಅನಾಸಕ್ತಿ ಆಶ್ರಮದಲ್ಲಿ ನಡೆಯಿತ್ತು. ಆ ಕಾರ್ಯ ಸಮಿತಿಯ ಸಭೆ ಸರ್ವ ಸೇವಾ ಸಂಘದ ಅಧ್ಯಕ್ಷರಾದ ಮಹಾದೇವ್ ವಿದ್ರೋಹಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಸಭೆಯಲ್ಲಿ ೧೬ ಜನ ಸದಸ್ಯರು ಮತ್ತು ೨೧ಜನ ಆಮಂತ್ರಿತ ಸದಸ್ಯರು ಹಾಜರಿದ್ದರು. ೧೯೨೯ರಲ್ಲಿ ಎರಡು ದಿನಗಳ ಮಟ್ಟಿಗೆ ಗಾಂಧೀಜಿ ಇಲ್ಲಿಗೆ ಬಂದಿದ್ದರು. ಇಲ್ಲಿಯ ಪ್ರಾಕೃತಿಕ ಸೌಂದರ್ಯದಿಂದ ಅವರು ಎಷ್ಟೊಂದು ಪ್ರಭಾವಿತರಾದರೆಂದರೆ ಅಲ್ಲಿ ಅವರು ಎರಡು ವಾರಗಳ ಕಾಲ ನಿಂತು ಬಿಟ್ಟರು. ಅಲ್ಲಿಯೇ ಅವರು ತಮ್ಮ ಸುಪ್ರಸಿದ್ಧ ಪುಸ್ತಕ 'ಅನಾಸಕ್ತಿ ಯೋಗ'ಕ್ಕೆ ಪ್ರಸ್ತಾವನೆ ಬರೆದರು. ಆದ್ದರಿಂದ ಅಲ್ಲಿ ಸ್ಥಾಪಿತವಾದ ಆಶ್ರಮಕ್ಕೆ ಅನಾಸಕ್ತಿ ಆಶ್ರಮ ಎಂಬ ಹೆಸರು ಬಂದಿತು.

ಸಭೆಯ ಪ್ರಾರಂಭದಲ್ಲಿ ಅಗಲಿದ ನಾಯಕರಿಗೆ ಮತ್ತು ಸಹ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸರ್ವೋದಯ ಸಮಾಜದ ನೂತನ ಸಂಯೋಜಕರಾಗಿ ಶ್ರೀ. ಆದಿತ್ಯ ಪಟ್ನಾಯಕ್‌ರನ್ನು ನಿಯುಕ್ತಿ ಮಾಡಲಾಯಿತು. ಸಂಘದ ಖಾಯಂ ಕಾರ್ಯಕರ್ತರ ಮೂಲ ವೇತನದಲ್ಲಿ ೧೦೦೦ ರೂಪಾಯಿಗಳನ್ನು ಹೆಚ್ಚಿಸಲಾಯಿತು.

ಕಳೆದ ಜುಲೈ ೧೪ರಂದು ಮಹಾರಾಷ್ಟ್ರ ಸರ್ವೋದಯ ಮಂಡಲದ ವಾರ್ಷಿಕ ಸಭೆ ನಡೆಯಿತು. ೫೦ ಜನ ಕಾರ್ಯಕರ್ತರು ಭಾಗವಹಿಸಿದ್ದರು. ಮಂಡಲಕ್ಕೆ ಶ್ರೀ.ಸೋಮನಾಥ ರೋಡೆಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಯಿತು.

ದೇಶದ ೧೭ ವಿಶ್ವವಿದ್ಯಾನಿಲಯಗಳಲ್ಲಿ ಗಾಂಧಿ ವಿಚಾರ ವಿಭಾಗಗಳಿವೆ. ೧೬೧ ಕಾಲೇಜುಗಳಲ್ಲಿ ಗಾಂಧೀ ಅಧ್ಯಯನ ಕೇಂದ್ರಗಳಿವೆ. ಈ ವಿಭಾಗಗಳಲ್ಲಿ ಕೆಲಸ ಮಾಡುವ ಶಿಕ್ಷಕರ ದಕ್ಷತೆ ಬೆಳೆಸುವ ದೃಷ್ಟಿಯಿಂದ ೨ದಿನಗಳ ಕಾರ್ಯಾಗಾರವನ್ನು ನಡೆಸಲಾಯಿತು. ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಡಾ?ವೇದ ಪ್ರಕಾಶ್‌ರವರನ್ನು ಭೇಟಿ ಮಾಡಿ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಶಾಂತಿ ಸೇನೆಯನ್ನು ಸೇರ್ಪಡಿಸುವ ಬಗ್ಗೆ ಮತ್ತು ಸರ್ವ ಸೇವಾ ಸಂಘ ಪ್ರಕಾಶನದ ಪುಸ್ತಕಗಳನ್ನು ಕಾಲೇಜುಗಳಿಗೆ ತರಿಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ವೇದ ಪ್ರಕಾಶ್‌ರವರು ಭರವಸೆ ಕೊಟ್ಟರು.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ವಾರಣಾಸಿಯಲ್ಲಿ ಅಖಿಲ ಭಾರತ ಮದ್ಯಪಾನ ನಿಷೇಧ ಸಮ್ಮೇಳನ ನಡೆಯಿತು.

ಅಸ್ಸಾಮ್ ರಾಜ್ಯದಲ್ಲಿ ಕುಳಿತುಕೊಂಡೆ ಅಂತರರಾಷ್ಟ್ರೀಯ ಮೈತ್ರಿಯ ಕಾರ್ಯವನ್ನು ಮಾಡಬಹುದೆಂದು ಆಲೋಚಿಸಿ ವಿನೋಬಾಜಿಯವರು ಆ ರಾಜ್ಯದಲ್ಲಿ ಆಶ್ರಮ ಸ್ಥಾಪಿಸಲು ಯೋಚಿಸಿದರು. ಆಶ್ರಮದ ಹೆಸರು ಮೈತ್ರಿ ಆಶ್ರಮ. ಅಸ್ಸಾಮ್ ರಾಜ್ಯ ಪಾಕಿಸ್ತಾನ, ನೇಪಾಳ, ಬರ್ಮಾ ಮತ್ತು ಚೀನಾ ದೇಶಗಳಿಂದ ಸುತ್ತುವರೆಯಲ್ಪಟ್ಟಿದೆ.

ಆದ್ದರಿಂದ ಇದೊಂದು ಆಯಕಟ್ಟಿನ ಸ್ಥಳ. ಆ ಕಾರಣಕ್ಕಾಗಿ ಲಖೀಮ್‌ಪುರದ ಲೀಲವಾಡಿಯಲ್ಲಿ ಮೈತ್ರಿ ಆಶ್ರಮ ಮಾರ್ಚ್ ೧೯೬೨ರಲ್ಲಿ ಸ್ಥಾಪಿತವಾಯಿತು. ಈ ಆಶ್ರಮಕ್ಕೆ ಸರ್ವ ಸೇವಾ ಸಂಘದ ಅಧ್ಯಕ್ಷ ಮಹದೇವ್ ವಿದ್ರೋಹಿಯವರು ಇತ್ತೀಚೆಗೆ ಭೇಟಿ ಕೊಟ್ಟು ಆಶ್ರಮದ ಚಟುವಟಿಕೆಗಳನ್ನು ನೋಡಿದರು.

೨೦೧೪ ಸೆಪ್ಟೆಂಬರ್‌ವರೆಗೆ ಸರ್ವ ಸೇವಾ ಸಂಘದ ಕಾರ್ಯಾಲಯದಲ್ಲಿ ದಾಖಲಾದ ನವೀಕೃತ ಲೋಕಸೇವಕ ಮತ್ತು ಸರ್ವೋದಯ ಮಿತ್ರರ ಸಂಖ್ಯೆ ಈ ರೀತಿ ಇದೆ : ಲೋಕಸೇವಕರು ೫೪೦; ಸರ್ವೋದಯ ಮಿತ್ರರು ೪೦೬. ಸಂಘದ ಮುಂದಿನ ಕಾರ್ಯಸಮಿತಿಯ ಸಭೆ ರಾಜಸ್ಥಾನದ ಖಿಮೇಲ್ ಎಂಬಲ್ಲಿ ಡಿಸೆಂಬರ್ ೨೪ ಮತ್ತು ೨೫ರಂದು ನಡೆಯಲಿದೆ.

*****

ಸಂತಾಪ

ಸರ್ವ ಸೇವಾ ಸಂಘದ ಕಾರ್ಯದರ್ಶಿಯು, ರಾಷ್ಟ್ರೀಯ ಲೋಕ ಸಮಿತಿಯ ಉಪಾಧ್ಯಕ್ಷರು, "ಭೂಮಿಪುತ್ರ"ದ ಸಂಪಾದಕರು, ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಸನ್ಮಾನಿತರು ಆಗಿದ್ದ ಗಾಂಧಿವಾದಿ ಚುನಿಭಾಯಿ ವೈದ್ಯ ಕಳೆದ ಡಿಸೆಂಬರ್ ೧೯ರಂದು ನಿಧನರಾದರು. ಅವರಿಗೆ ೯೨ವರ್ಷವಾಗಿತ್ತು. ದಿವಂಗತರಿಗೆ ಜನಪದ ವಿಚಾರ ಶ್ರದ್ಧಾಂಜಲಿ ಅರ್ಪಿಸುತ್ತದೆ.

*****

ಉತ್ತರ ಪ್ರದೇಶ ಗೋವಿಂದಪುರ ಜಿಲ್ಲೆಯ ಬನವಾಸಿ ಸೇವಾ ಆಶ್ರಮದ ಡಾ.ರಾಗಿನಿ ಪ್ರೇಮ್ ನವೆಂಬರ್ ೨ರಂದು ನಿಧನರಾದರು. ಉಸ್ಮಾನಿಯ ಯುನಿವರ್ಸಿಟಿಯಿಂದ ಡಾಕ್ಟರೇಟ್ ಪಡೆದು ಡಾ.ಸುಶೀಲ ನಯ್ಯರ್‌ರವರ ಜೊತೆಗೆ ಸೇವಾ ಗ್ರಾಮದಲ್ಲಿ ಕೆಲಸ ಮಾಡಿದರು. ಅವರನ್ನು ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಮತ್ತು ಇಂದಿರಾಗಾಂಧಿ ಪ್ರಶಸ್ತಿಗಳಿಂದ ಸನ್ಮಾನಿಸಲಾಗಿತ್ತು. ಇವರ ಇಡೀ ಜೀವನ ಗ್ರಾಮ ಸ್ವರಾಜ್ಯದ ಸ್ಥಾಪನೆ ಮತ್ತು ಕಾರ್ಯಕರ್ತರ ಬೆಳವಣಿಗೆಗಾಗಿ ಸಮರ್ಪಿತವಾಗಿತ್ತು.

ಸನ್ಮಾನ್ಯರಿಂದ

ಈ ಪತ್ರದೊಂದಿಗೆ 'ಜನಪದ ವಿಚಾರ' ದ ಚಂದಾಹಣಕ್ಕಾಗಿ ರೂ.೫೦೦.೦೦ರ ಚೆಕ್ ಕಳುಹಿಸುತ್ತಿದ್ದೇನೆ. ದಯವಿಟ್ಟು ಸ್ವೀಕರಿಸಿ. ಪತ್ರಿಕೆ ಬಹಳ ವಿಚಾರ ಪೂರ್ಣವಾಗಿ ಬೆಳೆಯುತ್ತಿದೆ. ಹೀಗೆಯೇ ಬೆಳೆಯುತ್ತಾ ಹೋಗಲಿ. ತಮ್ಮ ಸೇವಾ ಸಂಸ್ಥೆಯೂ ಹಾಗೆಯೇ ಬೆಳೆಯಲಿ ಎಂದು ನಮ್ಮೆಲ್ಲರ ಹಾರೈಕೆ.

– ಡಾ. ನ.ರತ್ನ, ಮೈಸೂರು.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ.ಆರ್.ವಿಜಯಕುಮಾರ್, ಶ್ರೀ.ಸಿ.ವಿ.ತಿರುಮಲರಾವ್,
ಶ್ರೀಮತಿ.ಗೀತಾ ಪಾರ್ಥಸಾರಥಿ, ಶ್ರೀಮತಿ. ಪ್ರಭಾ ವೆಂಕಟೇಶ್
ಶ್ರೀಮತಿ.ಪದ್ಮ ಪಿ.ಶೇಷಾದ್ರಿ, ಶ್ರೀಮತಿ.ರಂಗಮಣಿ ಜನಾರ್ಧನ್, – ಬೆಂಗಳೂರು
ಶ್ರೀ.ಬಿ.ಕೆ.ಶಿವಣ್ಣ, ಶ್ರೀ.ಕೆ.ಟಿ.ವೀರಪ್ಪ, ಶ್ರೀ.ಆರ್.ಆರ್.ಮಂಗಳಾವೇಡೆ,
ಶ್ರೀ.ಡಾ.ನ.ರತ್ನ, ಶ್ರೀ.ಎನ್.ಎಸ್.ರಘುನಾಥ್, ಶ್ರೀ.ಕೆ.ವಿ.ಶ್ರೀನಿವಾಸನ್
– ಮೈಸೂರು
ಶ್ರೀ.ಬಿಂದು ಮಾಧವ ವಡವಿ – ಮಂಡ್ಯ
ಶ್ರೀ.ನಾ.ಸು.ನಾಗೇಶ್ – ನಾಗಮಂಗಲ
ಶ್ರೀ.ಟಿ.ಜಿ.ಸತ್ಯನಾರಾಯಣ – ತಗಡೂರು
ಶ್ರೀ.ಡಿ.ಎಸ್.ನಾಗಭೂಷಣ್ – ಶಿವಮೊಗ್ಗ
ಶ್ರೀಮತಿ.ಇಂದುಮತಿ ವಿಜಯೇಂದ್ರನ್ – ಚನ್ನೈ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಜನಪದ ವಿಚಾರದ ಕೃತಜ್ಞತೆಗಳು

“ಜನಪದ ವಿಚಾರ” ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ “ಜನಪದ ವಿಚಾರ” ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at Sanketh Mudrna, Melkote